ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000, ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ಅನುಬಂಧ I, II ವಿಧೇಯಕವನ್ನು ಮಂಡಿಸಲಾಗಿದೆ.

(ii) ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000 ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000 ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000 ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ಅನುಬಂಧ I, II ವಿಧೇಯಕವನ್ನು ಮಂಡಿಸಲಾಗಿದೆ.

ಬಿ. ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(1) ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ 2000.

+ ಶ್ರೀ ಎಂ. ಶಿವಣ್ಣ (ಆರ್ಥಿಕ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ, 2000, ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ಶಿವಣ್ಣ (ಆರ್ಥಿಕ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಭಾರತೀಯ ರಿಸರ್ವ್ ಬ್ಯಾಂಕಿನ ವ್ಯಾಪ್ತಿಯಲ್ಲಿ ಬಂದಿರತಕ್ಕ ಹಣಕಾಸು ಸಂಸ್ಥೆಗಳು ಅನೇಕ ರೀತಿಯ ಠೇವಣಿಗಳನ್ನು ಆಹ್ವಾನಿಸಿ ಆಕರ್ಷಕ ಬಡ್ಡಿಯನ್ನು ಕೊಡುತ್ತೇವೆಂದು ಏನೆಲ್ಲ ಸೌಲಭ್ಯಗಳನ್ನು ಮಾಡಿಕೊಡುತ್ತೇವೆಂದು ತುಂಬಾ ಆಕರ್ಷಕವಾದ ಠೇವಣಿಗಳನ್ನು ಆಹ್ವಾನ ಮಾಡುತ್ತಾರೆ. ಈ ರೀತಿಯ ಆಹ್ವಾನಗಳು ಬಂದಂತಹ ಸಂದರ್ಭದಲ್ಲಿ ಜನರು ಠೇವಣಿಗಳನ್ನು ಇಡತಕ್ಕದ್ದನ್ನು ನಾವು ನೋಡಿದ್ದೇವೆ. ಅನೇಕ ರೀತಿಯಲ್ಲಿ ಭಾರಿ ಮೋಸವಾಗತಕ್ಕದ್ದು ಜಾಸ್ತಿ. ಇಂತಹ

ಸಂಸ್ಥೆಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡು ಠೇವಣಿ ಹಣವನ್ನು ವಾಪಸ್ಸು ಕೊಡದೆ ಕಾನೂನು ಸುವ್ಯವಸ್ಥೆಗೆ ಭಂಗ ಉಂಟಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನವರ ಒಂದು ಸಲಹೆಯ ಮೇಲೆ ಅವುಗಳನ್ನು ನಿಯಂತ್ರಣ ಮಾಡಬೇಕೆನ್ನುವ ಸದುದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ಇದರ ಸದುದ್ದೇಶ ಬಹಳ ಮುಖ್ಯವಾಗಿ ಠೇವಣಿದಾರರ ಹಿತರಕ್ಷಣೆ ಮಾಡುವಂಥಾದ್ದು. ಠೇವಣಿಯನ್ನು ಇಟ್ಟಿರತಕ್ಕಂಥವರಿಗೆ ಸಕಾಲದಲ್ಲಿ ಠೇವಣಿ ವಾಪಾಸ್ಸು ಬರಬೇಕು ಮತ್ತು ಬಡ್ಡಿ ಕೂಡ ಸಕಾಲದಲ್ಲಿ ಬರಬೇಕು. ಅದು ಬಾರದಿದ್ದ ಸಂದರ್ಭದಲ್ಲಿ ಅವರಿಗೆ ಅನ್ಯಾಯವಾಗುತ್ತದೆ ಎಂದು ಹೇಳಿ ಅವರ ಹಿತರಕ್ಷಣೆಗೋಸ್ಕರವಾಗಿ ಈ ಮಸೂದೆಯನ್ನು ತರುತ್ತಿದ್ದೇನೆ. ಇದನ್ನು ನಿಯಂತ್ರಣ ಮಾಡಬೇಕೆಂಬ ದೃಷ್ಟಿಯಿಂದ ರಿಸರ್ವ್‌ಬ್ಯಾಂಕ್ ಒಳ್ಳೆಯ ಸಲಹೆಯನ್ನು ಕೊಟ್ಟಿದೆ. ಅದಕ್ಕೋಸ್ಕರ ಈ ಕಾಯಿದೆಯನ್ನು ಈಗಾಗಲೇ ಮಹಾರಾಷ್ಟ್ರ, ಹರಿಯಾಣ, ಗುಜರಾತ್, ತಮಿಳುನಾಡು ಮತ್ತು ಕೇರಳದಲ್ಲಿ ಜಾರಿಗೆ ತಂದು ಅದು ಯಶಸ್ವಿಯಾಗಿದೆ. ಈ ದಿಸೆಯಲ್ಲಿ ಬಹಳ ಮುಖ್ಯವಾಗಿ ಇದರಲ್ಲಿ ಇರತಕ್ಕಂಥಾದ್ದು ಏನೆಂದರೆ ಈಗ ಸರ್ಕಾರಕ್ಕೆ ಸಾಕಷ್ಟು ಕಾನೂನಿನಲ್ಲಿ ಯಾವುದೇ ಒಂದು ಸಂದರ್ಭದಲ್ಲಿ ಇಂತಹ ಅವ್ಯವಹಾರ ಆಗಿದೆಯೆಂದಾಗ ಪೊಲೀಸ್ ಕಂಪ್ಲೇಂಟ್ ಕೊಟ್ಟು ಅದರ ಮೂಲಕ ಅದನ್ನು ನಿರ್ವಹಣೆ ಮಾಡುವುದು ಆಗುತ್ತಿತ್ತು. ಇದನ್ನು ಒಂದು ಶಾಸನಬದ್ಧವಾದ ಕಾನೂನಾಗಿ ಮಾಡಬೇಕೆಂಬ ದೃಷ್ಟಿಯಿಂದ ಈಗ ಒಂದು ನೋಟಿಫಿಕೇಶನ್‌ನ್ನು ಹೊರಡಿಸಿ ಗೆಜೆಟೆಡ್ ಅಧಿಕಾರಿಯನ್ನು ನೇಮಕ ಮಾಡುವುದರ ಮೂಲಕ ಮುಂದೆ ಇಂಥಾದ್ದು ಏನಾದರೂ ಮೋಸವಾದರೆ ಜಪ್ತಿ ಮಾಡತಕ್ಕಂಥ ಅವಕಾಶ ಕೊಡತಕ್ಕಂಥಾದ್ದು, ಅದಕ್ಕೋಸ್ಕರವಾಗಿ ನಮ್ಮ ಹೈಕೋರ್ಟಿನ ಮುಖ್ಯನ್ಯಾಯಾಧೀಶರ ಸಲಹೆ ಪಡೆದು ಅದರ ಅಭಿಪ್ರಾಯದ ಮೇಲೆ ಒಂದು ವಿಶೇಷ ನ್ಯಾಯಾಲಯಗಳನ್ನು ರಚನೆ ಮಾಡತಕ್ಕಂಥಾದ್ದು, ಈ ನ್ಯಾಯಾಲಯಕ್ಕೆ ಒಬ್ಬ ಜಿಲ್ಲಾ ಸೆಶನ್ ಜಡ್ಜ್‌ಗೆ ಕಡಿಮೆ ಇಲ್ಲದ ರೀತಿಯಲ್ಲಿ ನ್ಯಾಯಾಧೀಶರನ್ನು ನೇಮಕ ಮಾಡತಕ್ಕದ್ದು ಕೂಡ ಇದರಲ್ಲಿ, ಅವಕಾಶವನ್ನು ಕಲ್ಪಿಸಿ ಕೊಟ್ಟಿದೆ. ಜೊತೆಗೆ ಅಂತ ಒಂದು ಮೋಸದ ಪ್ರಕರಣದಲ್ಲಿ ಭಾಗಿಯಾದಂಥ ಅಲ್ಲಿ ಒಬ್ಬ ಪ್ರವರ್ತಕ ಇರಬಹುದು, ನಿರ್ದೇಶಕ ಇರಬಹುದು, ಯಾರಿಗಾದರೂ ಕೂಡ ತಪ್ಪು ಮಾಡಿದವರಿಗೆ ಹತ್ತು ವರ್ಷ ಸೆರೆವಾಸ ಜೊತೆಗೆ ಒಂದು ಲಕ್ಷ ರೂಪಾಯಿ ಜುಲ್ಮಾನೆಯನ್ನು ವಿಧಿಸತಕ್ಕಂಥ ಅವಕಾಶವನ್ನು ಈ ಮಸೂದೆಯಲ್ಲಿ ತರಲಾಗಿದೆ. ಈ ಮಸೂದೆಗಳ ಬಗ್ಗೆ ತಾವು ಬೆಳಕನ್ನು ಚೆಲ್ಲಿ ಇದನ್ನು ಅನುಮೋದನೆ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಕೆ.ಹೆಚ್. ಹನುಮೇಗೌಡ :— ನನಗೆ ಒಂದು ಕ್ಲಾರಿಫಿಕೇಶನ್ ಬೇಕು. ಚಿಟ್ ಫಂಡ್ ವಿಚಾರದಲ್ಲಿ...

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ) :— These institutions who do business outside does not come well within

the purview of the Reserve Bank of India Act. ಆದ್ದರಿಂದ ಒಟ್ಟಾಗಿ ಮುಖ್ಯವಾಗಿ ಆಗಬೇಕಾಗಿದ್ದು ಏನೆಂದರೆ ಬೆಂಗಳೂರಿನಲ್ಲಿ ಸುಮಾರು 50 ಸಾವಿರಕ್ಕಿಂತ ಹೆಚ್ಚು ಜನ ಈ ರೀತಿ ಹಣ ತೊಡಗಿಸಿ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನಮ್ಮ ಜತೆ ಅವರು ಸಂಪರ್ಕ ಮಾಡಿದ್ದಾರೆ. ಆದ್ದರಿಂದ ಈ ಆಕ್ಟ್‌ನ್ನು ಅದರ ಪವ್ವರ್ ಒಳಗೆ ತರದೇ ಇದ್ದರೆ-They will go berserk and they have gone berserk. Hundreds of crores of Rupees have been drained out. I would appeal to the Members to see that they are covered under the R.B.I. Act.

ಶ್ರೀ ಕೆ.ಹೆಚ್. ಹನುಮೇಗೌಡ :— ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ಚಿಟ್ ಫಂಡ್ ವಿಚಾರದಲ್ಲಿ ತಂದಿರುವ ಈ ತಿದ್ದುಪಡಿ ಸ್ವಾಗತಾರ್ಹ. ಇದರಿಂದ ಲಕ್ಷಾಂತರ ಜನರಿಗೆ ಒಳ್ಳೆಯದಾಗುತ್ತದೆ. ಆದರೆ ಕೆಲವು ಹಳ್ಳಿಗಳಲ್ಲಿ, ಮತ್ತು ಪಟ್ಟಣಗಳಲ್ಲಿ ಈ ಸಾಲ ಕೊಡುವುದು ಎಂದು ಹೇಳಿ ಕೆಲವರು ಎಂತೆಂಥಾದ್ದೋ ಫೈನಾನ್ಸ್ ಅಂತ ಇಟ್ಟುಕೊಂಡಿರುತ್ತಾರೆ. ಹಾಗೆ ಇಟ್ಟುಕೊಂಡಿದ್ದು ಒಂದು ದಿವಸಕ್ಕೆ, ಬೆಳಗ್ಗೆ 100 ರೂಪಾಯಿ ದುಡ್ಡು ತೆಗೆದುಕೊಳ್ಳುವುದು ಮತ್ತು ಸಂಜೆ 110 ರೂಪಾಯಿ ವಾಪಾಸ್ಸು ಕೊಡುವುದು, ಈ ರೀತಿಯಲ್ಲಿ ಬಡ್ಡಿಹಾಕುತ್ತಿದ್ದಾರೆ. ಆಮೇಲೆ 5 ಪರ್ಸೆಂಟ್, 10 ಪರ್ಸೆಂಟ್ ಅಂತ ಹೀಗೆಲ್ಲ ಮಾಡುತ್ತಾರೆ. ಹಾಸನದಲ್ಲಿ ಒಬ್ಬ ಈ ರೀತಿ ಶುರುಮಾಡಿ ಜನರಿಗೆ ಮೋಸ ಮಾಡಿದ್ದರ ಬಗ್ಗೆ ನಾನು ಗಮನಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಅದು ಬಂದಾಗ ಅದರ ಬಗ್ಗೆ ಹೇಳುತ್ತೇನೆ. ಫೈನಾನ್ಸ್ ಅಂತ ಇಟ್ಟುಕೊಂಡು ವೈಯಕ್ತಿಕವಾಗಿ ಏನು ಸಾಲ ಕೊಡುತ್ತಾರೆ, ಅದಕ್ಕೆ 5, 10, 15 ಪರ್ಸೆಂಟ್ ವರೆಗೆ ಬಡ್ಡಿ ಹಾಕುತ್ತಾರೆ. ನಾನು ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ ಅದು ಕೂಡ ಈ ಮಸೂದೆಯಲ್ಲಿ ಸೇರಿದೆಯೆ?

ಅಧ್ಯಕ್ಷರು :— ದೇವರಾಜ್ ಅರಸು ಅವರ ಕಾಲದಲ್ಲಿ Debtor's Act ಅಂತ ಒಂದು ಮಾಡಿದ್ದರು...

ಶ್ರೀ ಎಂ. ಶಿವಣ್ಣ :— ಮಾನ್ಯ ಅಧ್ಯಕ್ಷರೇ, ಎಲ್ಲವನ್ನೂ ಕೂಡ ನಿಯಂತ್ರಣ ಮಾಡಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ನಿತ್ಯವೂ ಭಾರಿ ಸಂಖ್ಯೆಯಲ್ಲಿ ಹೇವಣಿ ಇಟ್ಟುಕೊಳ್ಳುತ್ತಾರೆಂದು ಹೇಳಿದರು. ಈ ಸಂಸ್ಥೆಗಳಿಗೆ ನಿಯಂತ್ರಣವೇ ಇಲ್ಲದಹಾಗೆ ಆಗಿದೆ. ಇವೆಲ್ಲವನ್ನೂ ಕೂಡ ಕಾನೂನು ಚೌಕಟ್ಟಿನಲ್ಲಿ ನಿಯಂತ್ರಣಗೊಳಿಸಬೇಕು ಎನ್ನುವಂಥ ಉದ್ದೇಶ ಇಲ್ಲಿದೆ. ತಾವು ಹೇಳಿದ್ದು ಕೂಡ ಈ ವ್ಯಾಪ್ತಿಯಲ್ಲಿ ಬರುತ್ತದೆ.

ಅಧ್ಯಕ್ಷರು :— ಈಗ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿಲಾಸರಾವ್ ದೇಶಮುಖ್ ಅವರು ನಮ್ಮ ಅಧಿಕಾರಿಗಳ ಗ್ಯಾಲರಿಯಲ್ಲಿ ಬಂದು ಕುಳಿತಿದ್ದಾರೆ. ತಮ್ಮ ಅಮಾಹನೆಗೋಸ್ಕರ ಇದನ್ನು ತಿಳಿಸುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಏನು The Karnataka Protection of Interest of Depositors in Financial Establishment Bill ತಂದಿದ್ದೀರಿ, ಅದನ್ನು ನಾನು ಹೃತ್ಪೂರ್ವಕವಾಗಿ ಈ ವಿಧೇಯಕವನ್ನು ಸ್ವಾಗತಿಸುತ್ತೇನೆ. ತಾವು ಇಲ್ಲಿ ಹೇಳಿದ್ದೀರಿ. ಕರ್ನಾಟಕದಲ್ಲಿ, ಬೆಂಗಳೂರಿನಲ್ಲಿ ಇದೊಂದು ದೊಡ್ಡ ದಂಧೆಯಾಗಿಬಿಟ್ಟಿದೆ. ಅದನ್ನು common parlance ದಲ್ಲಿ ಬ್ಲೇಡ್ ಕಂಪನಿ ಅಂತಾನೇ ಕರೆಯುತ್ತಾರೆ. ಇಂತಹ ಡಿಪಾಸಿಟರ್ಸ್ ಜೇಬಿಗೆ ಬ್ಲೇಡ್ ಹಾಕುವುದಕ್ಕೋಸ್ಕರ ಈ ಕಂಪನಿಗಳು ಬಂದಿರುವುದು. ದೊಡ್ಡ ದೊಡ್ಡ ಹೆಸರುಗಳು, ಕಿರ್ಲೋಸ್ಕರ ಇನ್ವೆಸ್ಟ್‌ಮೆಂಟ್ ಫೈನಾನ್ಸ್ ಲಿಮಿಟೆಡ್, ಇಂತಹ ಹೆಸರುಗಳಿರುವ ಸಂಸ್ಥೆಗಳಲ್ಲಿ 130 ರಿಂದ 150 ಕೋಟಿ ರೂಪಾಯಿಗಳನ್ನು ಜನರು ಏನು ಇನ್ವೆಸ್ಟ್ ಮಾಡಿದ್ದಾರೆ, ಇದು ಯಾರು ಮಾಡಿರುವುದು? ಮಧ್ಯಮವರ್ಗ, ಕೆಳಮಧ್ಯಮ ವರ್ಗದ ಜನರು ನಿವೃತ್ತಿಯಾದಮೇಲೆ ರಿಟೈರ್‌ಮೆಂಟ್ ದುಡ್ಡನ್ನು ತೆಗೆದುಕೊಂಡುಹೋಗಿ, ಏನೋ ಜಾಸ್ತಿ ಬಡ್ಡಿ ಬರುತ್ತದೆ, ನನ್ನ ಮಗಳ ಮದುವೆಗೆ ಉಪಯೋಗವಾಗುತ್ತದೆ, ಅಥವಾ ವಯಸ್ಸಾದ ಮೇಲೆ ಆನುಕೂಲವಾಗುತ್ತದೆ ಎನ್ನುವ ಭಾವನೆ ಅಥವಾ ಭ್ರಮೆಯಿಂದ ಅಥವಾ ಒಂದು ಆಸೆಯಿಂದ ಇಂತಹ ಕಡೆಗಳಲ್ಲಿ ದುಡ್ಡು ಹಾಕಿಕೊಂಡಿದ್ದಾರೆ. ಇದೇ ರೀತಿ ಶಾಶ್ವತಿ ಫೈನಾನ್ಸ್, ಶ್ರೀನಿಧಿ ಫೈನಾನ್ಸ್, ಇತ್ಯಾದಿ ಅನೇಕ ಸಂಸ್ಥೆಗಳಿವೆ. ಮಾನ್ಯ ಸಚಿವರು ಹೇಳಿದ್ದು ಸರಿ. ಬೆಂಗಳೂರಿನಲ್ಲಿ ಸುಮಾರು 45 ರಿಂದ 50 ಸಾವಿರ ಜನರು ಇದರಲ್ಲಿ ಇದ್ದಾರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೊರಗಡೆಯಿಂದ ಇನ್ವೆಸ್ಟರ್ಸ್‌ನ್ನು ಕರೆಯುತ್ತಾರೆ. ಅಷ್ಟು ಇನ್ವೆಸ್ಟರ್ಸ್ ಇಲ್ಲೇ ಇದ್ದಾರೆ. ಆದರೆ ಇವರ ಹತ್ತಿರ ದುಡ್ಡು ಹಾಕಿಬಿಟ್ಟಿದ್ದಾರೆ ಅಷ್ಟೆ. ಸರ್ಕಾರದಲ್ಲಿ ಹಣ ಹಾಕುತ್ತಿಲ್ಲ. ಆದರೆ ಇವರ ಮೇಲೆ ಯಾವುದೇ ರೀತಿಯ ನಿಯಂತ್ರಣ ಇಲ್ಲ. ಇವರ ಕಚೇರಿಗಳಿಗೆ ಹೋಗಿಬಿಟ್ಟರೆ ದಿಗ್ಭ್ರಮೆಯಾಗುತ್ತದೆ. ಅಷ್ಟು ಆಧುನಿಕವಾಗಿ ಅಲಂಕಾರ ಮಾಡಿ ಜನರನ್ನು ಆಕರ್ಷಿಸುತ್ತಾರೆ. ಆದರೆ ನಿಗದಿತ ಸಮಯದಲ್ಲಿ ದುಡ್ಡು ಕೊಡುವುದಿಲ್ಲ. ಒಂದು ದಿವಸ ಬೇಗಹಾಕಿ ಓಡಿಹೋಗುತ್ತಾರೆ. ಇವರ ಮೇಲೆ ನಿಯಂತ್ರಣ ತರಬೇಕೆಂದು ಕಳೆದ ನಾಲ್ಕೈದು ತಿಂಗಳಿಂದ ನಾನು ಕಾನೂನು ಸಚಿವರ ಬೆನ್ನುಹಿಂದೆ ಬಿದ್ದಿದ್ದೆ. ದಯವಿಟ್ಟು ಈ ಠೇವಣಿದಾರರ ಭವಿಷ್ಯ ಏನಿದೆ, ಅವರ ಜೀವನಮಟ್ಟವನ್ನು ಉಳಿಸಿಯೆಂದು ನಾನು ಅವರನ್ನು ಆಗ್ರಹ ಮಾಡುತ್ತಿದ್ದೆ. ಒಂದು ರೀತಿಯಲ್ಲಿ ಆ ಠೇವಣಿದಾರರ ಪರವಾಗಿ ತರಲಾಗಿರುವ ಈ ಮಸೂದೆ ಏನಿದೆ, ಇದು ಸ್ವಾಗತಾರ್ಹ. ಸರ್ಕಾರ ಹೇಳುತ್ತದೆ ನಾವು ಇರುವುದು ನಿಮ್ಮಂಥವರ ರಕ್ಷಣೆಗೋಸ್ಕರ ಮತ್ತು ನಿಮ್ಮಂಥವರ ಹಿತವನ್ನು ಕಾಪಾಡುತ್ತೇವೆ ಎಂದು. ಆದ್ದರಿಂದ ಈ ಮಸೂದೆಯನ್ನು ತಂದಿರುವುದಕ್ಕೋಸ್ಕರ ನಾನು ಸರ್ಕಾರಕ್ಕೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಒಂದೇ ಒಂದು ತಿದ್ದುಪಡಿ. ಅದೇನೆಂದರೆ ಸೆಕ್ಷನ್ (3)ರಲ್ಲಿ Attachment of properties on default of return of deposits ಅಂತ ಇದೆ. ಆದರೆ ಅವರಲ್ಲಿ ಎಷ್ಟು ಆಸ್ತಿ ಇರುತ್ತದೆ ಎಂದು ನಮಗೆ ಗೊತ್ತಿಲ್ಲ. ಸರ್ವೇ

ಸಾಮಾನ್ಯವಾಗಿ ಪೊಲೀಸರು ಇಂತಹ ಪ್ರಸಂಗ ಬಂದಾಗ ಫೈನಾನ್ಸ್ ಕಾರ್ಪೋರೇಷನ್‌ಗಳಿಗೆ ಸಪೋರ್ಟ್ ಮಾಡುತ್ತಾರೆ. ಆ ತೀವಣೆದಾರರ ಹಿತ ಕಾಪಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೋಸ್ಕರ ಈ ಒಂದು ವಿಧೇಯಕದಲ್ಲಿ ಒಂದು ಇಂಪ್ರಿಸನ್‌ಮೆಂಟ್ ಕ್ಲಾಸ್‌ನ್ನು ಕೂಡ ಸೇರಿಸಬೇಕು. ಕೊನೆಯಲ್ಲಿ ಅದು ಇದೆ. ಈಗ ಅವನನ್ನು ತಕ್ಷಣ ಅರೆಸ್ಟ್ ಮಾಡಿದರೆ ಗೊತ್ತಾಗುತ್ತದೆ. ಮೂಗು ಹಿಡಿದರೆ ಬಾಯಿಬಿಡುತ್ತಾನೆ. ಆದ್ದರಿಂದ ಆ ಒಂದು ಕ್ಲಾಸ್‌ನ್ನು ಸೇರಿಸಬೇಕು. ಜೊತೆಗೆ ಸರ್ಕಾರ ಈ ಸಂಸ್ಥೆಗಳನ್ನು ಸ್ವಲ್ಪ ಮಾನಿಟರ್ ಮಾಡುವುದಕ್ಕೋಸ್ಕರ ಏನಾದರೂ ವ್ಯವಸ್ಥೆ ಮಾಡಬೇಕು. ಮೂರು ತಿಂಗಳಿಗೆ ಅಥವಾ ಆರು ತಿಂಗಳಿಗೊಮ್ಮೆ ಮಾನಿಟರ್ ಮಾಡಿ ಇವುಗಳು ಯಾವರೀತಿ ನಡೆಯುತ್ತಿವೆ ಎಂದು ನೋಡಬೇಕು. ಇನ್ನೊಂದು ಕ್ಲಾಸನ್ನು ಸೇರಿಸಿ, ವಿಳಂಬವಾಗಿ ಏನು ಮರುಪಾವತಿ ಮಾಡುತ್ತಾರೆ, ಅದಕ್ಕೂ ಕೂಡ ಒಂದು 'ಪೆನಾಲ್ಟಿ ಕ್ಲಾಸನ್ನು' ಸೇರಿಸಬೇಕು. ಈ ರೀತಿ ಸೇರಿಸಿ ಇವತ್ತು ಏನು ವಿಧೇಯಕವನ್ನು ತಂದಿದ್ದೀರಿ, ಅದಕ್ಕೆ ಇನ್ನಷ್ಟು ಶಕ್ತಿ ಕೊಟ್ಟು, ಈ ಬ್ಲೇಡ್ ಕಂಪನಿಗಳು ಏನೇನೆ ಇನ್ನಷ್ಟು ಅವರು ಜನರನ್ನು ಹಾಳು ಮಾಡುವುದಕ್ಕೆ ಮುಂಚೆ ಈಗಾಗಲೇ ಸಾಕಷ್ಟು ಜನರು ಹಾಳುಮಾಡಿಕೊಂಡಿದ್ದಾರೆ. ಇನ್ನಷ್ಟು ಹಾಳು ಮಾಡುವುದಕ್ಕೆ ಈ ವಿಧೇಯಕವನ್ನು ಕಾನೂನಾಗಿ ಮಾಡಿ ಇದರ ನಿಯಂತ್ರಣ ಮಾಡಬೇಕೆಂದು ನಾನು ಆಗ್ರಹಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ವಿಲಾಸರಾವ್ ದೇಶ್‌ಮುಖ್ ಅವರು ನಮ್ಮ ಜತೆಯಲ್ಲಿದ್ದು ಸದನದ ವೀಕ್ಷಣೆ ಮಾಡುತ್ತಿದ್ದಾರೆ. I welcome the Hon'ble Chief Minister of Maharashtra along with my colleague legislators. ಮತ್ತು ಅದೇ ರೀತಿ ಮಹಾರಾಷ್ಟ್ರ ಮತ್ತು ಕರ್ನಾಟಕದ ಒಂದು ಬೆಸುಗೆ ಬಹಳ ಸೌಹಾರ್ದತೆಯಿಂದ ಇಲ್ಲಿಯವರೆಗೆ ಇದೆ. ಅದು ಇನ್ನೂ ಹೆಚ್ಚು ಆಗಲಿ ಎಂದು ನಾನು ಈ ಸಂದರ್ಭದಲ್ಲಿ ಬಯಸುತ್ತೇನೆ.

10.50 ಪಿ.ಎಂ.

+ SRI D.B. CHANDREGOWDA (Law & Parliamentary affairs minister) :— I join the Hon'ble Leader of the Opposition in welcoming the Hon'ble Chief Minister of Maharashtra who is present and amidst us. I hope and trust as you expressed, our historic ties from long old days will strengthen and it is an inspiration to the legislature of Karnataka. I would again thank him for gracing the legislature Proceedings. I join the Leader of the Opposition.

ಶ್ರೀ ಜಗದೀಶ್ ಶೆಟ್ಟರ್:— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರ ಬಹಳ ಮಹತ್ವದ ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೆ. ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಿದ್ದೇನೆ. ಏಕೆಂದರೆ, ಇದರಲ್ಲಿರತಕ್ಕ ಕಂಟೆಂಟ್ಸ್ ನೋಡಿದರೆ ಕೇವಲ ಚಿಟ್ ಫಂಡ್ಸ್ ದೃಷ್ಟಿ ಇಟ್ಟುಕೊಂಡು ಈ ಬಿಲ್ಲನ್ನು ತಂದಿದ್ದಾರೆ. ಚಿಟ್ ಫಂಡ್‌ನಲ್ಲಿ ಯಾರು ಕೇವಣೆದಾರರು ಹಣವನ್ನು ಏನು ಸಂಗ್ರಹ ಮಾಡುತ್ತಾರೆ, ಅದು ನೂರಾರು ಕೋಟಿ, ಸಾವಿರಾರು ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಮೂಲಕ ಸಂಗ್ರಹ ಮಾಡುತ್ತಾರೆ. ಅವರು ಯಾವುದೋ ಹಂತದಲ್ಲಿ ಮಂಗಮಾಯಮಾಡಿ ಬಿಡುತ್ತಾರೆ. ಇದು ಬಹಳಷ್ಟು ಕಡೆ ನಡೆಯುತ್ತಾ ಇದೆ. ಕೇವಲ ಬೆಂಗಳೂರು ಅಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ ಇದು ನಡೆಯುತ್ತಾ ಇದೆ. ಇದು ಬೇರೆ ಬೇರೆ ದೇಶದಲ್ಲೂ ನಡೆಯುತ್ತಾ ಇದೆ. ಈ ಚಿಟ್ ಫಂಡ್ಸ್ ವ್ಯವಹಾರ ಕೇವಲ ಹಣವನ್ನು ಡಿಪಾಸಿಟ್ ಮಾಡುವುದಲ್ಲ, ಅವರು ಬೇರೆ ಬೇರೆ ಆಸ್ತಿ ಆಮಿಷಗಳನ್ನು ಕೊಟ್ಟು, ಈ ರೀತಿ ತೊಡಗಿಸಿದಂಥ ಕೋಟ್ಯಾಂತರ ರೂಪಾಯಿಗಳನ್ನು ಮೋಸ ಮಾಡುವಂಥಾದ್ದನ್ನು ನಾವು ದಿನನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಬೇರೆ ಬೇರೆ ರೂಪ ಇದೆ. ಹೀಗಾಗಿ ಕೇವಲ ಈ ಚಿಟ್ ಫಂಡ್ಸ್, ಈ ಡಿಪಾಸಿಟರ್ಸ್ ಇದನ್ನಷ್ಟೇ ಅಲ್ಲ, ಈ ಬಿಲ್‌ನಲ್ಲಿ ಇನ್ನೂ ಹಲವಾರು ಈ ರೀತಿಯ ಸ್ಕೀಮುಗಳನ್ನು ಒಳಗೊಂಡಂಥ ಮತ್ತು ಹಣ ಸಂಗ್ರಹಣೆ ಮಾಡುವಂಥಾದ್ದು ಏನಾದರೂ ಇದ್ದರೆ, ಅದನ್ನೂ ಈ ಬಿಲ್‌ನಲ್ಲಿ ತೆಗೆದುಕೊಂಡು ಬಂದಿದ್ದಾರೆ ಬಹಳ ಒಳ್ಳೆಯದಾಗುತ್ತಿತ್ತು ಎಂಬುದು ನನ್ನ ಭಾವನೆ. ಇವತ್ತಿನ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಹೀಗೆ ಬಂದಿದೆ.

"ಕುಬ್ಬಳ್ಳಿ-ಲಾಟರಿ ಹೆಸರಿನಲ್ಲಿ ಭಾರೀ ಪಂಗನಾಮ"

ಯೀ ಕಾರ್ಪೊರೇಷನ್ ಎನ್ನುವ ಹೆಸರಿನಲ್ಲಿ ಸ್ಥಾಪಿತವಾದ ಸಂಸ್ಥೆ ಉತ್ತರ ಕರ್ನಾಟಕದ 30 ಸಾವಿರ ಜನರಿಗೆ ವಂಚನೆ ಮಾಡಿದೆ. ಒಟ್ಟು ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ಲಾಟರಿ ಮಾಡುತ್ತೇವೆ, ಇಂತಹ ಮನ್ಸುಗಳನ್ನು ಹಂಚುತ್ತೇವೆ ಎಂದು ಹೇಳಿ, ಜನರಿಗೆ ಮರುಳು ಮಾಡಿ ಒಂದು ಕೋಟಿ 80 ಲಕ್ಷ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ನಿನ್ನೆ ಅವರು ಲಾಟರಿ ಡ್ರಾ ಇಟ್ಟಿದ್ದರು. ಅದನ್ನು ಮುಂದೆ ಹಾಕಿದರು.

ನಿನ್ನೆ ಅಲ್ಲಿ ಸುಮಾರು 10 ಸಾವಿರ ಜನ ಸೇರಿದ್ದಾರೆ. ಆ ಲಾಟರಿ ಎತ್ತುವಾಗ ನಿಜವಾಗಿಯೂ ಲಾಟರಿ ಟಿಕೆಟ್‌ನಲ್ಲಿ ಯಾವ ನಂಬರುಗಳು ಇದ್ದವು, ಆ ನಂಬರು ಅಲ್ಲಿ ಇಲ್ಲವೇ ಇಲ್ಲ. ಆ ಬ್ಲಾಕ್‌ನಲ್ಲಿ ಇದ್ದಂಥ ನಂಬರುಗಳೇ ಬೇರೆ. ಆಮೇಲೆ ಯಾರಿಗೋ ಕೆಲವರಿಗೆ ಬಹುಮಾನ ಪ್ರಕಟ ಮಾಡಿದರು. ಆದರೆ, ಆ ಬಹುಮಾನಗಳನ್ನು ಕೊಡಲಿಲ್ಲ. ಹೀಗಾಗಿ ಸಂಶಯ ಬಂದು ಜನಗಳು ವಿಚಾರ ಮಾಡಿದಾಗ ಇದೆಲ್ಲಾ ಬೋಗಸ್ ಎಂಬುದು ಗೊತ್ತಾಯಿತು. ಆಮೇಲೆ ಜನಗಳೇ ಅವರನ್ನು ಥಳಿಸಿ, ಹೊಡೆದು ಅಟ್ಟಿದ್ದಾರೆ.

ನಂತರ ಅವರ ಬಂಧನ ಆಗಿದೆ. ಹೀಗಾಗಿ ಇವತ್ತು ಈ ರೀತಿಯಾಗಿ ಜನಗಳಿಗೆ ಮೋಸ ಮಾಡುವಂಥ ಪ್ರವೃತ್ತಿ ಬಹಳಷ್ಟು ನಡೆಯುತ್ತಾ ಇದೆ. ಜನರಿಗೆ ಏನಾಗಿ ಬಿಟ್ಟಿದೆ ಎಂದರೆ, ಇಂತಹ ಒಂದು ಆಸೆ ಆಮಿಷಗಳಿಗೆ ಒಳಗಾಗುವಂಥಾದ್ದು ಆದರೆ, ಇವತ್ತಿನ ಒಂದು ಸಾಮಾಜಿಕ ವ್ಯವಸ್ಥೆ ಇರಬಹುದು, ಅಥವಾ ಇನ್ನಿತರ ವ್ಯವಸ್ಥೆ ಇರಬಹುದು. ಜನರು ಇವತ್ತು ಇಂತಹ ಯೋಜನೆಗಳಿಗೆ ಮರುಳಾಗುವುದನ್ನು ನಾವು ನೋಡುತ್ತಿದ್ದೇವೆ. ಜನ ಮರುಳಾಗಿ ಅಲ್ಲಿ ಸಾಕಷ್ಟು ಹಣವನ್ನು ತೊಡಗಿಸುತ್ತಾರೆ. ಏಕೆಂದರೆ, ಒಬ್ಬ ಮಧ್ಯಮ ವರ್ಗದ ಒಬ್ಬ ಬಡವ ತನ್ನ ದಿನನಿತ್ಯದ ಕೂಲಿನಾಲಿ ಇರಬಹುದು ಅಥವಾ ದಿನನಿತ್ಯ ದುಡಿದುಂಥಾದ್ದು ಇರಬಹುದು. ಅಥವಾ ಸಣ್ಣ ಸಂಬಳ ಇರಬಹುದು. ಅದರಲ್ಲಿ ನನಗೆ ಹೆಚ್ಚಿನ ರೀತಿಯಲ್ಲಿ ಪ್ರಯೋಜನವಾಗಬಹುದು ಎನ್ನುವ ಆಸೆಯಿಂದ ಅಂತಹ ಕಂಪನಿಗಳಲ್ಲಿ ಹಣವನ್ನು ತೊಡಗಿಸುತ್ತಿದ್ದಾರೆ. ಇವತ್ತು ಜನ ಮರುಳೋ ಜಾತ್ರೆ ಮರುಳೋ ಎಂಬ ಗಾದೆಯಂತೆ ಜನಗಳು ಇಂತಹ ಯೋಜನೆಗಳಿಗೆ ನುಗ್ಗಿ ಹಣವನ್ನು ಡಿಪಾಸಿಟ್ ಮಾಡುವಂಥಾದ್ದನ್ನು ನಾವು ನೋಡಿದ್ದೇವೆ. ಇಂತಹ ಕಂಪನಿಗಳು ಇರುವುದನ್ನು ಬಹಳಷ್ಟು ನಗರಗಳಲ್ಲಿ ನೋಡುತ್ತಿದ್ದೇವೆ. ಆಮೇಲೆ ಮೊನ್ನೆ ಚಿತ್ರದುರ್ಗದಲ್ಲಿ, ಆಂಧ್ರಮೂಲದ ಸದರನ್ ಗುಂಪಿನ ಕಛೇರಿ. ಅಂದರೆ ಆಂಧ್ರಪ್ರದೇಶದ ಮೂಲಕ ಸದರನ್ ವಂಡರ್ ವರ್ಲ್ಡ್ ರಿಸಾರ್ಟ್ಸ್ ಎಂಬ ಕಂಪನಿಯವರು ಸುಮಾರು 20 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ಇದು ಕೇವಲ ಚಿತ್ರದುರ್ಗದಲ್ಲಿಯೇ ಅಲ್ಲ, ರಾಜ್ಯದ ನಾನಾ ಕಡೆಗಳಲ್ಲಿ, ದಾವಣಗೆರೆ, ಭದ್ರಾವತಿ ಮತ್ತು ಚಿತ್ರದುರ್ಗ ಇವುಗಳನ್ನು ಸೆಂಟರ್ ಮಾಡಿಕೊಂಡು 20 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದಾರೆ. ಇದರಲ್ಲಿ ಹಣ ಇಟ್ಟಿರುವವರು ಯಾರು ಎಂದರೆ ಮಧ್ಯಮವರ್ಗದವರು. ಕೂಲಿ ಕೆಲಸ ಮಾಡುವವರು, ಕೃಷಿಕರು. ಇವರ ಹಣವನ್ನು ಇವತ್ತು ಅವರು ಲೂಟಿ ಹೊಡೆದಿದ್ದಾರೆ. ಆಮೇಲೆ, ಅವರು ಮುಚ್ಚಿಕೊಂಡು ಹೋಗಿಬಿಟ್ಟರು. ಈ ಕಂಪನಿಯ ಮೂಲ ಆಂಧ್ರಪ್ರದೇಶದ್ದು. ಅವರು ಇಲ್ಲಿ ಬಂದು 20 ಕೋಟಿ ಸಂಗ್ರಹ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ಆದರೆ, ಇನ್ನೂ ಎಷ್ಟು ಹಣ ಸಂಗ್ರಹ ಮಾಡಿದ್ದಾರೋ ಗೊತ್ತಿಲ್ಲ. ಹೀಗಾಗಿ ಇಂತಹ ಸಂಸ್ಥೆಗಳ ಬಗ್ಗೆಯೂ ನಾವು ಜಾಗೃತರಾಗಬೇಕಾಗುತ್ತದೆ. ಇವತ್ತು ಈ ರೀತಿ ಮೋಸ ಮಾಡುವಂಥಾದ್ದು ನಡೆದಾಗ, ಇವತ್ತು ಕೊನೇ ಪಕ್ಷ ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಅವರು ಕೊಡುವಂಥ ಯೋಜನೆಗಳು, ಅವರು ಕೊಡುವಂಥ ಆಮಿಷಗಳು ಇವು ಸ್ವಲ್ಪಮಾದರೂ ಗೊತ್ತಾಗುತ್ತದೆ. ಅಲ್ಲಿದ್ದಂತಹ ಪೋಲೀಸ್ ಅಧಿಕಾರಿಗಳು ಇರಬಹುದು, ಇನ್ನಿತರ ಅಧಿಕಾರಿಗಳು ಇರಬಹುದು, ಇಂಟೆಲಿಜೆನ್ಸ್ ಇರಬಹುದು. ಎಲ್ಲಿ ಜನಮೋಸ ಹೋಗುತ್ತಿದ್ದಾರೆ, ಎಲ್ಲಿ ಜನ ಜೀವ ತೇಯ್ದು ಹಣವನ್ನು ತೊಡಗಿಸುತ್ತಿದ್ದಾರೆಂದರೆ, ಅಲ್ಲಿ ಏನೋ ಬೇರೆ ರೀತಿಯಾದ ವ್ಯವಸ್ಥೆ ಆಗಿದೆ. ಮೋಸ ಮಾಡುವಂಥ ಜಾಲ ಇದೆಯೆಂದು ಗೊತ್ತಾಗುತ್ತದೆ. ಇಂತಹ ಸಮಯದಲ್ಲಿ ಸರ್ಕಾರಿ ವ್ಯವಸ್ಥೆ, ಸರ್ಕಾರಿ ಮಿಷನರಿ ಅಲರ್ಟ್ ಆಗುವಂಥಾದ್ದು ಆಗಬೇಕಾಗಿದೆ.

ಅಂದಾಗ ಮಾತ್ರ ಇವುಗಳನ್ನು ತಡೆಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಅದರ ಬಗ್ಗೆಯೂ ಈ ಬಿಲ್ಲಿನಲ್ಲಿ ನೀವು ಪ್ರಾವಿಷನ್ ಮಾಡಿದ್ದರೆ ಬಹಳ ಒಳ್ಳೆಯದು ಆಗುತ್ತದೆ. ಇವರುಗಳು ಯಾವರೀತಿ ಮಾಡುತ್ತಾರೆಂದರೆ, ಒಳ್ಳೆಯ ರೀತಿಯಲ್ಲಿ ಪ್ರಾಸ್ಪೆಕ್ಟಸ್ ಹೊರಡಿಸುತ್ತಾರೆ. ಇವತ್ತು ಸದರನ್ ವಂಡರ್ ವರ್ಲ್ಡ್ ರೆಸಾರ್ಟ್ಸ್ ಎಂದು ಕರ್ನಾಟಕದಲ್ಲಿ ಇದೆ. ಅದು ಎಲ್ಲಿಲ್ಲಿ ಇದ್ದಾವೆಂದರೆ, ತಿರುಪತಿಯಲ್ಲಿ, ಬೆಂಗಳೂರಿನಲ್ಲಿ, ಶಿರಡಿಯಲ್ಲಿ, ಮೈಸೂರಿನಲ್ಲಿ, ಮತ್ತು ವಿಶಾಖಪಟ್ಟಣ ಹಾಗೂ ಬೇರೆ ಬೇರೆ ಪ್ರಮುಖ ನಗರಗಳಲ್ಲಿ ರೆಸಾರ್ಟ್ಸ್ ಇವೆಯೆಂದು ಪ್ರಾಸ್ಪೆಕ್ಟಸ್ ಹೊರಡಿಸಿದ್ದಾರೆ. ಇವತ್ತು ಪತ್ರಿಕಾ ವರದಿ ಹೇಳುತ್ತದೆ. ಇವುಗಳನ್ನೆಲ್ಲಾ ಚೆಕ್ ಮಾಡಿದಾಗ ಈ ಊರುಗಳಲ್ಲಿ ರೆಸಾರ್ಟೇ ಇಲ್ಲ. ಈ ಸದರನ್ ವಂಡರ್ ವರ್ಲ್ಡ್ ಕಂಪನಿಯ ರೆಸಾರ್ಟ್ಸ್ ಎಲ್ಲಿಯೂ ಇಲ್ಲ. ಇವತ್ತು ಚಿತ್ರದುರ್ಗದಲ್ಲಿ ಈ ಕಂಪನಿ ಬಂದು, ಜನಗಳಿಗೆ ಇಂತಹ ಪ್ರಾಸ್ಪೆಕ್ಟಸ್ ಹಂಚುತ್ತಿದೆ. ಇಂತಹ ಸಮಯದಲ್ಲಿ ನಮ್ಮ ಸರ್ಕಾರಿ ಅಧಿಕಾರಿಗಳು, ಪೋಲೀಸ್ ಇಲಾಖೆಯ ಅಧಿಕಾರಿಗಳು ಗಮನವಿಟ್ಟು ಇನ್‌ವೆಸ್ಟಿಗೇಷನ್ ಮಾಡಿದರೆ, ಚೆಕ್ ಮಾಡಿದರೆ ಇದರಲ್ಲಿ ನಿಜಾಂಶ ಇದೆಯೋ ಇಲ್ಲವೋ, ಇದರ ಹಿನ್ನೆಲೆ ಏನು? ಆ ವ್ಯಕ್ತಿಗಳು ಎಲ್ಲಿಂದ ಬಂದಿದ್ದಾರೆ, ಎಂಬುದು ಗೊತ್ತಾಗುತ್ತದೆ. ಆಗ ಇಂತಹ ಕಂಪನಿಗಳ ಬಗ್ಗೆ ಜನ ಮರುಳಾಗುವುದು, ಜನ ಹಣವನ್ನು ಅಲ್ಲಿ ಇಡುವಂತಾದ್ದು ತಪ್ಪುತ್ತದೆ. ಅವರು ಕೋಟ್ಯಾಂತರ ರೂಪಾಯಿಗಳನ್ನು ದೋಚುವಂಥಾದ್ದು ತಪ್ಪುವುದಕ್ಕೆ ಸಾಧ್ಯವಿದೆ. ಇದನ್ನು ಅವಾಯ್ಡ್ ಮಾಡುವುದಕ್ಕೆ ಸಾಧ್ಯವಿತ್ತು. 20 ಕೋಟಿ ರೂಪಾಯಿ ಹೋಯಿತು. ಇವತ್ತು ಮಧ್ಯ ಮವರ್ಗದವರು, ಬಡವರು ತೊಳಲಾಡುತ್ತಿದ್ದಾರೆ. ಇಂತಹ ಕಂಪನಿಗಳ ಬಗ್ಗೆಯೂ ಈ ಬಿಲ್ಲಿನಲ್ಲಿ ಹೇಳಬೇಕಾಗಿತ್ತು. ಇದು ಕೇವಲ ಚಿಟ್ ಫಂಡ್ಸ್ ಬಗ್ಗೆ ಮಾತ್ರ ತಾವು ಹೇಳುತ್ತಿದ್ದೀರಿ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಏನು ಹೇಳುತ್ತಿದ್ದಾರೆ, ಆ ವಿಷಯದಲ್ಲಿ ಒಂದು ಪ್ರಕಟಣೆ ದಾವಣಗೆರೆಯ ಪತ್ರಿಕೆಗಳಲ್ಲಿ ಬಂದಿದೆ. ಆ ಪ್ರಕಟಣೆ ಎಷ್ಟು ಚೆನ್ನಾಗಿದೆ ಎಂದರೆ, ಈ ವಿಷಯಗಳ ಬಗ್ಗೆ ಬೇರೆ ಬೇರೆಯವರೆಲ್ಲರೂ ಕೂಡ ಈ ರೀತಿಯ ಅಕ್ರಮವಾಗಿದೆ ಎಂದು ಮೈಸೂರಿನಲ್ಲಿ ಮತ್ತು ಎಲ್ಲಾ ಕಡೆಯೂ ಪೋಲೀಸ್ ಕಂಪ್ಲೇಂಟ್ ಕೊಟ್ಟು ಅವರನ್ನು ಅರೆಸ್ಟ್ ಮಾಡುವಂತಹ ವ್ಯವಸ್ಥೆಯಾಗಿದೆ. ಈ ದೃಷ್ಟಿಯಲ್ಲಿ ಕರ್ನಾಟಕದ ಮುಖ್ಯಮಂತ್ರಿಗಳು, ತಮಿಳುನಾಡಿನ ಮುಖ್ಯಮಂತ್ರಿಗಳಿಗೆ ಇದರಲ್ಲಿ ಏನು ಅಕ್ರಮ ನಡೆದಿಲ್ಲವೆನ್ನುವ ವಿಚಾರವನ್ನು ಹೇಳಿದ್ದೇವೆ. ಎಲ್ಲಾ ಡಾಕ್ಯುಮೆಂಟ್ಸ್‌ಗಳನ್ನು ಎರಡು ರಾಜ್ಯಗಳ ಮುಖ್ಯಮಂತ್ರಿಗಳಿಗೂ ಕಳುಹಿಸಿದ್ದೇವೆ. ಇದರ ವಿಚಾರದಲ್ಲಿ ಅವರಿಗೆ ಮನವರಿಕೆ ಮಾಡಿಕೊಟ್ಟಿದೆ. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಅಕ್ರಮವಾಗಿಲ್ಲವೆಂಬುದನ್ನು ಅವರ ಒಪ್ಪಿಗೆಗೂ ಕೊಟ್ಟಿದ್ದೇವೆ ಎಂಬ ಪ್ರಕಟಣೆಯನ್ನು ಎರಡೂ ಮುಖ್ಯಮಂತ್ರಿಗಳ ಭಾವಚಿತ್ರವನ್ನು ಹಾಕಿ, ಈ ಕಂಪನಿಯವರು ಇವತ್ತಿನ ಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟು, ಯಾರು ಇನ್ವಸ್ಟರ್ಸ್ ಇದ್ದಾರೆ, ಅವರು ಯಾರೂ

ಹೆದರಬೇಕಾಗಿಲ್ಲವೆಂದು ಬಂದಿದೆ. ಅದನ್ನು ಫ್ಯಾಕ್ಟ್ಸ್ ಮಾಡುವುದನ್ನೂ ಕೂಡ ಹೇಳಿದ್ದೇವೆ, ಅದು ಬರುತ್ತಿದ್ದಹಾಗೆಯೇ ಅಧ್ಯಕ್ಷರಿಗೆ ತಲುಪಿಸುತ್ತೇವೆ.

+ಶ್ರೀ ಜಗದೀಶ್ ಶೆಟ್ಟರ್:— ಈ ಸದರನ್ ಜಂಡರ್ ವರ್ಲ್ಡ್ ಬಗ್ಗೆ ಹೆಚ್ಚಿನ ನಿಗಾ ಇಟ್ಟು ಕ್ರಮಕೈಗೊಳ್ಳಬೇಕು. ಈಗಾಗಲೇ ಕೆಲವರ ಬಂಧನವಾಗಿದೆಯೆಂದು ಪೋಲೀಸ್ ವರದಿ ಇದೆ. ಅದರ ಬಗ್ಗೆಯೂ ಸರ್ಕಾರ ಸ್ಪಷ್ಟನೆ ಮಾಡಲಿ. ಈ ರೀತಿ ಹಲವಾರು ಮೋಡಸನೆಗಳನ್ನು ಇಟ್ಟುಕೊಂಡು ಜನರನ್ನು ಮರುಳು ಮಾಡುವಂಥಾದ್ದು ನಡೆಯುತ್ತಾ ಇದೆ. ಮತ್ತೊಂದು ಬೆಳಗಾಂನಲ್ಲಿ, ಜಪಾನ್ ದೇಶದ ಮ್ಯಾಗ್ನೆಟಿಕ್ ಬೆಡ್ ಎಂದು ಬಂದಿದೆ. ಇವತ್ತು ನಾವು ಪೇಟೆಯೊಳಗೆ 5-10 ಸಾವಿರ ಕೊಟ್ಟು ಬೆಡ್ ತೆಗೆದುಕೊಂಡರೆ, ಇವತ್ತು ಅಲ್ಲಿ 80 ಸಾವಿರ ರೂಪಾಯಿಗಳಿಗೆ ಒಂದು ಬೆಡ್. ಇವತ್ತು ನಿಮಗೆ ಬಿ.ಪಿ. ಇದ್ದರೆ ಹೋಗುತ್ತದೆ, ಡಯಾಬಿಟೀಸ್ ಹೋಗುತ್ತದೆ, ಬಹಳ ಆರೋಗ್ಯವಂತರಾಗಿ ಇರುತ್ತೀರಿ ಎನ್ನುವಂತಹ ಪ್ರಕಟಣೆಯನ್ನು ಅದು ಕೊಟ್ಟಿದೆ ಅದಕ್ಕೂ ಜನ ಮರುಳಾಗುತ್ತಾ ಇದ್ದಾರೆ. ಇವತ್ತು ಜಪಾನ್ ಮೂಲಕ ಕಂಪನಿ, ಮ್ಯಾಗ್ನೆಟಿಕ್ ಬೆಡ್ ಎಂದು ಬೆಳಗಾಂನಲ್ಲಿ ಮಾರಾಟಮಾಡುತ್ತಿದ್ದಾರೆ ಈ ಸ್ಕೀಮ್ ಹೇಗಿದೆ ಎಂದರೆ, 80 ಸಾವಿರ ರೂಪಾಯಿ ಕೊಟ್ಟು ಒಂದು ಬೆಡ್ ತೆಗೆದುಕೊಂಡರೆ, ಮತ್ತೆ ಮೂರು ಜನ ಮೆಂಬರ್ಸ್ ಮಾಡಬೇಕು. ಇವತ್ತು ನಾನು 80 ಸಾವಿರ ಕೊಟ್ಟು ತೆಗೆದುಕೊಂಡರೆ, ಮತ್ತೆ ಮೂರು ಜನ ಮೆಂಬರ್ಸ್ ಮಾಡಬೇಕು. ನಾನು ಮೂರು ಜನ ಮೆಂಬರ್ಸ್ ಮಾಡಿದರೆ, 80 ಸಾವಿರ ಫ್ರೀ ಆಗುತ್ತದೆ. ಹೀಗೆ ಅದು ಒಂದು ಚೈನ್ ಇದೆ. ಅಂದರೆ, ಆ ಬೆಡ್‌ಗೆ 80 ಸಾವಿರ ಕಿಮ್ಮತ್ತು ಇಲ್ಲ. ಇದರಲ್ಲೇನಿದೆ ಎಂದರೆ ಜನರಿಗೆ ಮರುಳು ಮಾಡಿ ಹಣ ಸಂಪಾದಿಸುತ್ತಾರೆ. ಈ ಹಣ ಆ ಕಂಪನಿಯವರಿಗೆ ಹೋಗುತ್ತದೆ. ಈ ಚೈನ್ ಮುಖಾಂತರ ಕೋಟ್ಯಾಂತರ ರೂಪಾಯಿ ಹಣ ಅವರಿಗೆ ಹೋಗುತ್ತದೆ. ನಾವು ಮೂರು ಮಂದಿ ಮೆಂಬರ್ಸ್ ಮಾಡುವುದು, ಅವರಿಂದ ಮತ್ತೆ ಮೂರು ಮಂದಿ ಮೆಂಬರ್ಸ್. ಇದರಿಂದ ಇಷ್ಟು ಹೇರ್ ಎಂದು ಕಂಪನಿಗೆ ಹೋಗುತ್ತದೆ. ಇದು ಯಾವುದೇ ಖಾನೂನು ಚೌಕಟ್ಟಿನಲ್ಲಿ ಬರುವುದಿಲ್ಲವೇ, ಇದನ್ನು ನಿರ್ಬಂಧ ಮಾಡುವುದಕ್ಕೆ ಬರುವುದಿಲ್ಲವೇ ಹೇಗೆ? ಈ ರೀತಿ ಓಪನ್ ಆಗಿ, ಅವರು ದರೋಡೆಯನ್ನು ಮಾಡುವಂಥ ಸಂದರ್ಭದಲ್ಲಿ, ಇವತ್ತು ಸಮಾಜಕ್ಕೆ ವಂಚನೆ ಮಾಡುವಂಥ ಸಂದರ್ಭದಲ್ಲಿ, ಇದನ್ನು ಅವಾಯ್ಡ್ ಮಾಡುವುದಕ್ಕೆ ಆಗುತ್ತದೋ ಇಲ್ಲವೋ? ಇದರ ಬಗ್ಗೆ ನೀವು ಏನು ಚಿಂತನೆ ಮಾಡುತ್ತೀರಿ? ಎನ್ನುವುದನ್ನು ಹೇಳಬೇಕು. ಯಾವ ರೀತಿ ಮಾಗ್ನೆಟಿಕ್ ಬೆಡ್ ಇದೆ ಅದೇ ರೀತಿಯಲ್ಲಿ ಸರ್ಕಾರಿ ಕಛೇರಿಗಳಲ್ಲಿ, ಪ್ರಮುಖವಾದ ಇಲಾಖೆಯ ಹಿರಿಯ ಅಧಿಕಾರಿಗಳ ಪ್ರಾಬಲ್ಯದಿಂದ ಕೆಲವು ಸ್ಕೀಮ್‌ಗಳನ್ನು ಮಾಡುತ್ತಿದ್ದಾರೆ. 11 ಸಾವಿರ ರೂಪಾಯಿಗಳ ಒಂದು ಸ್ಕೀಮ್, 22 ಸಾವಿರ ರೂಪಾಯಿಗಳ ಒಂದು ಸ್ಕೀಮ್ ಅವನು ನಾಲ್ಕು ಜನ ಮೆಂಬರ್ಸ್‌ನ್ನು ಮಾಡುವುದು, ಇದರಲ್ಲಿ ಅಧಿಕಾರಿಗಳು ಕೋಟ್ಯಾಂತರ ರೂಪಾಯಿಗಳನ್ನು ಗಳಿಸಿದ್ದಾರೆ. ಅವರ ಸರ್ಕಾರಿ ಕಛೇರಿಗಳು, ಸರ್ಕಾರಿ

ಕಛೇರಿಗಳು ಮತ್ತು ಕೆಲವೊಂದು ಕಛೇರಿಗಳಲ್ಲಿ ಇದು ನಡೆಯುತ್ತಿದೆ. ಇದರಿಂದ ವಂಚನೆ ಆಗುವುದು ಯಾರಿಗೆಂದರೆ ಗ್ರಾಹಕರಿಗೆ, ಜನಸಾಮಾನ್ಯರಿಗೆ ಮಧ್ಯಮ ವರ್ಗದ ಜನರಿಗೆ ಇದರಿಂದ ತೊಂದರೆಯಾಗುತ್ತಿದೆ. ಈ ರೀತಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಈಗ ನಮ್ಮ ನಾಡಿನಲ್ಲಿ ಆಗುತ್ತಿದೆ. ಇವತ್ತು ನೀವು ಈ ಚಿಟ್ ಫಂಡ್ ಬಗ್ಗೆ ಹೇಳುತ್ತಿದ್ದೀರಿ. ಈಗಾಗಲೇ ಇಂತಹ ಸ್ಕೀಮ್‌ಗಳು ಅನೇಕ ನಡೆಯುತ್ತಿವೆ ಇವು ಎಲ್ಲರಿಗೂ ಗೊತ್ತಿದೆ. ಇಂತಹ ಸ್ಕೀಮ್‌ಗಳನ್ನು ನಿರ್ಭಂದ ಮಾಡುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಈ ವಿಧೇಯಕದಲ್ಲಿ ಇಂತಹ ಅಂಶಗಳನ್ನು ಸಹ ತಾವು ಸೇರಿಸಿದರೆ ಅನುಕೂಲವಾಗುತ್ತದೆ. ಸಂಶಯಾಸ್ಪದ ರೀತಿಯಲ್ಲಿ ಏನು ಸ್ಕೀಮ್‌ಗಳನ್ನು ಮಾಡುತ್ತಾರೆ ಅದರಿಂದ ಜನರಿಗೆ ಯಾವ ರೀತಿ ವಂಚನೆ ಮಾಡುತ್ತಾರೆ, ಅವರಿಂದ ಏನು ಹಣ ಸಂಗ್ರಹಣೆ ಮಾಡುತ್ತಾರೆ, ಅಂತಹವರ ಮೇಲೆ ಈಗ್ಗೆನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು. ಈ ಕಾನೂನಿನಲ್ಲಿ ಇಂತಹ ವಿಷಯಗಳನ್ನು ಸಹ ಅಳವಡಿಸಿದರೆ ಮಾತ್ರ ಅವರಿಂದ ಜನರಿಗೆ ಏನಾದರೂ ಪರಿಹಾರ ಕೊಟ್ಟಂತೆ ಆಗುತ್ತದೆ. ತಾವು ಈ ಕಾನೂನಿನಲ್ಲಿ ಯಾರು ಹೆಚ್ಚಿನ ಬಡ್ಡಿ ಆಸೆಗೆ ಡಿಪಾಸಿಟ್ ಮಾಡುತ್ತಾರೆ ಆ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ ಈ ಕಾನೂನು ಇದೆ, ಬೇರೆ ಬೇರೆ ಸ್ಕೀಮ್‌ಗಳ ಮೂಲಕ ಕೋಟ್ಯಾಂತರ ರೂಪಾಯಿಗಳ ಹಣ ಸಂಗ್ರಹಣೆ ಆಗುತ್ತಿದೆ, ಅದರ ಸಲುವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಜನಸಾಮಾನ್ಯರ ಹಣ, ಮಧ್ಯಮ ವರ್ಗದ ಜನರ ಕೋಟ್ಯಾಂತರ ರೂಪಾಯಿಗಳು ಹೋಗುತ್ತಿದೆ. ಜನರಿಗೆ ಪಂಗನಾಮ ಹಾಕುತ್ತಿದ್ದಾರೆ. ಇದನ್ನು ತಡೆಯಲಿಕ್ಕೆ ಸರ್ಕಾರ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :— ಮಾನ್ಯ ಅಧ್ಯಕ್ಷರೇ, ಬಹಳ ತಡವಾಗಿಯಾದರೂ ಎಚ್ಚೆತ್ತುಕೊಂಡು ನಮ್ಮ ಹಣಕಾಸಿನ ಸಚಿವರು ಈ ಮಸೂದೆಯನ್ನು ತಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡಿ, ನಮ್ಮ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಇಂತಹ ಸಂಸ್ಥೆಗಳು ಏನು ಹೇವಾಣಿ ಇಟ್ಟುಕೊಂಡು ಅವ್ಯವಹಾರ ಮಾಡಿ, ಬಡ್ಡಿ ಜಾಸ್ತಿ ಕೊಡುತ್ತೇವೆ. ಒಂದಕ್ಕೆ ಎರಡರಷ್ಟು ಬಡ್ಡಿ ಕೊಡುತ್ತೇನೆಂದು ಹೇಳಿಕೊಂಡು ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆಯುತ್ತಾ ಇರುತ್ತೆಂಬುದನ್ನು ನಾವು ಪ್ರತಿನಿತ್ಯ ಕಾಣುತ್ತಿದ್ದೇವೆ. ಇವತ್ತು ನಾಯಿ ಕೊಡೆಗಳಂತೆ ಇಂತಹ ಸಂಸ್ಥೆಗಳು ಹುಟ್ಟಿಕೊಂಡಿವೆ. ಈಗಾಗಲೇ ವಿರೋದಪಕ್ಷದ ನಾಯಕರು ತಿಳಿಸಿದರು, ಮಾನ್ಯ ಸುರೇಶ್‌ಕುಮಾರ್ ತಿಳಿಸಿದರು, ಇದಕ್ಕೆ ಒಂದು ಚಿಟಿವಾಣ ಹಾಕಿ ಇವು ವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡಬೇಕು. ಈ ಮಸೂದೆಯ ಮೂಲಕ ಒಬ್ಬ ಅಸಿಸ್ಟೆಂಟ್ ಕಮೀಷನರ್‌ನ್ನು ನೇಮಕ ಮಾಡಿರುವಂಥಾದ್ದು, ಮತ್ತು ಆಫೀಲು ಪ್ರಾಧೀಕಾರಕ್ಕೆ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳುವಂಥಾದ್ದು, ಮತ್ತು ಅವರಿಗೆ 10 ವರ್ಷಗಳ ಜಾಲ ಶಿಕ್ಷೆಗೆ ಗುರಿಪಡಿಸುವಂಥಾದ್ದು, ಮತ್ತು ಜುಲ್ಮಾನೆ

ಒಂದು ಲಕ್ಷ ಹಾಕುವಂಥಾದ್ದು ಇದೆ. ಮತ್ತು ತಾವು ಹೇಳಿದ ಹಾಗೆ ತಕ್ಷಣ ಆಗಬೇಕಾದಂತಹ ಕೆಲಸ. ಇದಕ್ಕೆ ಸಾಕಷ್ಟು ಪ್ರಚಾರ ಕೊಟ್ಟು ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್ ವ್ಯಾಪ್ತಿ ಮತ್ತು ಇದರಲ್ಲಿ ನಡೆಯುವಂಥಾದ್ದು ಏನು ಎಂದು ಜನರಲ್ಲಿ ಮನವರಿಕೆಯಾಗಬೇಕು. ನಾವು ಕಂಡಿರತಕ್ಕದ್ದು ಏನೆಂದರೆ ಹೆಣ್ಣು ಮಕ್ಕಳು ಕೂಡಿಟ್ಟ ಹಣವನ್ನು ತೆಗೆದುಕೊಂಡು ಹೋಗಿ ಇಂತಹ ಸಂಸ್ಥೆಗಳಲ್ಲಿ ಇನ್‌ವೆಸ್ಟ್ ಮಾಡುವಂಥಾದ್ದು, ಆ ಹೆಣ್ಣು ಮಕ್ಕಳು ನಮಗೆ ಇದರಿಂದ ಏನಾದರೂ ಹೆಚ್ಚು ಹಣ ಬರಬಹುದು ಎನ್ನುವ ಆಸೆಯಿಂದ ತೆಗೆದುಕೊಂಡು ಹೋಗಿ ಹಣವನ್ನು ಇಡುವಂತಾದ್ದು, ಇವತ್ತು ಬೆಂಗಳೂರು ನಗರದಲ್ಲಿ ಸಾವಿರಾರು ಸಂಸ್ಥೆಗಳು ಫೈನಾನ್ಸ್ ಅಂತ ಹಾಕಿಕೊಂಡು ಇನ್‌ವೆಸ್ಟ್‌ಮೆಂಟ್ ಮಾಡಿಕೊಳ್ಳುವಂತಹ ವ್ಯವಸ್ಥೆಯನ್ನು ಕಾಣುತ್ತಿದ್ದೇವೆ. ಅನೇಕ ಸಂಸ್ಥೆಗಳಿಗೆ ರಿಜಿಸ್ಟ್ರೇಶನ್ ಇಲ್ಲ. ಯಾವುದೇ ನಿಯಮ ಇಲ್ಲ. ಯಾವುದೋ ಒಂದು ರಸ್ತೆಯಲ್ಲಿ ಒಂದು ಮನೆ ತೆಗೆದುಕೊಳ್ಳುತ್ತಾರೆ ಒಂದು ಫೈನಾನ್ಸ್ ಕಂಪನಿ ಅಂತ ಪ್ರಾರಂಭ ಮಾಡುವಂತಾದ್ದು, ಹೆಚ್ಚು ಬಡ್ಡಿ ಇಟ್ಟಂಂತಹವರಿಗೆ 15-20 ಪರ್ಸೆಂಟ್ ಬಡ್ಡಿ ಕೊಡುತ್ತೇವೆಂದು ಆಕರ್ಷಣೆ ಮಾಡುವಂತಾದ್ದು, ಸ್ವಲ್ಪ ಸಮಯ ಇದ್ದು ಹಣ ಜಮಾ ಮಾಡಿಕೊಳ್ಳುವುದು ನಂತಹ ಆ ಜಾಗ ಖಾಲಿ ಮಾಡಿ ಓಡಿ ಹೋಗುವುದು, ಬೆಂಗಳೂರು ಬಿಟ್ಟು ಹೈದ್ರಾಬಾದ್‌ಗೆ ಹೋಗುವುದು ಇಲ್ಲಾ ಚೆನ್ನೈಗೆ ಹೋಗುವುದು ಯಾವುದೋ ಒಂದು ಪಟ್ಟಣ ಪ್ರದೇಶದಲ್ಲಿ ಅತಿ ಹೆಚ್ಚು ಈ ರೀತಿ ಜನರನ್ನು ಆಕರ್ಷಣೆ ಮಾಡಿ ಜನರಿಗೆ ತೊಂದರೆ ಮಾಡುವುದು ಅವರ ಹಣವನ್ನು ತೆಗೆದುಕೊಂಡು ಹೋಗುವುದು, ಅವರಿಗೆ ಏನೂ ಇಲ್ಲ. ನಾವು ಅವರ ವಿರುದ್ಧ ಪೋಲೀಸ್ ಕಂಪ್ಲೆಂಟ್ ಕೊಟ್ಟು ಕೇಳಿದರೆ ಅವರು ಹೇಳುತ್ತಾರೆ ಇದು ಸಿವಿಲ್ ಕೇಸ್, ನೀವು ಸಿವಿಲ್ ಕೇಸ್ ಹಾಕಿ ವಸೂಲಿ ಮಾಡಿಕೊಳ್ಳಿ ಅಂತ ಹೇಳುತ್ತಾರೆ. ಅದು ಸಾಧ್ಯವಿಲ್ಲ. ಆದರೆ ಕ್ರಿಮಿನಲ್ ಆಕ್ಷನ್ ತಕ್ಷಣ ಆಗಬೇಕು, ನಿಮ್ಮ ಅಸಿಸ್ಟೆಂಟ್ ಕಮೀಷನರ್‌ರವರು ಅವರ ಆಸ್ತಿಯನ್ನು ತಕ್ಷಣ ಜಪ್ತಿ ಮಾಡುವಂಥಾದ್ದು, ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂಥಾದ್ದು, ಹಣವನ್ನು ಯಾರು ಆ ಸಂಸ್ಥೆಯಲ್ಲಿ ಇಟ್ಟಿದ್ದಾರೆ, ಆ ಸಂಸ್ಥೆಯ ಡೈರೆಕ್ಟರ್ಸ್ ಯಾರು ಇದ್ದಾರೆ ಯಾರ್ಯಾರು ಆ ಸಂಸ್ಥೆಯಲ್ಲಿ ಸೇರಿಕೊಂಡಿದ್ದಾರೆ, ಅವರೆಲ್ಲರ ಆಸ್ತಿಯನ್ನು ಅಟ್ಯಾಚ್‌ಮೆಂಟ್ ಮಾಡಿ, ಜಪ್ತಿ ಮಾಡಿ, ತೀವ್ರವಾಗಿ ಆ ಕಾರ್ಯಕ್ರಮಗಳನ್ನು ಮಾಡಿದರೆ ಆಗ ಆ ಜನರಿಗೆ ಒಂದು ಸುದ್ದಿ ಹೋಗುತ್ತದೆ, ಭಯಪಡುತ್ತಾರೆ, ಹೌದು ಇಲ್ಲಿ ಆ ರೀತಿ ನಡೆಯುವುದಕ್ಕೆ ಅವಕಾಶ ಇಲ್ಲ ಅಂತ. ನಮ್ಮ ರಾಜ್ಯದಲ್ಲಿ ಅನೇಕ ಚಿಟ್‌ಫಂಡ್ಸ್ ನಡೆಯುತ್ತಿವೆ. ನಾವು ಅವುಗಳನ್ನು ಚೀಟ್ ಫಂಡ್ಸ್ ಅಂತ ಹೇಳಿಕೊಂಡು ಬಂದಿದ್ದೇವೆ. ಬ್ಲೇಡ್ ಕಂಪನಿಗಳು ಅಂತ ನಾವು ಹೇಳಿಕೊಂಡು ಬಂದಿದ್ದೇವೆ. ಎಷ್ಟೋ ಜನ ತಮ್ಮ ಮನೆಗಳಲ್ಲಿ ಸೇವಿಂಗ್ಸ್ ಮಾಡಿ ಮುಂದೆ ನಮ್ಮ ಕಷ್ಟಸುಖಕ್ಕೆ ಆಗುತ್ತದೆಂದು ಇಟ್ಟುಕೊಂಡಿದ್ದಂತಹ ಹಣ ಹಾವಿನ ಬಾಯಲ್ಲಿ ದುಡ್ಡು ಹಾಕಿದಂತೆ ಇವತ್ತು ಆಗುತ್ತಿದೆ. ಈ ರೀತಿ ಸಾಕಷ್ಟು ಹಣ ಅನ್ಯಾಯವಾಗುತ್ತಿದೆ. ಇಂತಹ ಬೋಗಸ್ ಕಂಪನಿಗಳು ಏನು

ಇವೆ, ಮೋಸ ಮಾಡುವುದಕ್ಕೇ ಇಂತಹ ಕಂಪನಿಗಳು ಹುಟ್ಟಿಕೊಳ್ಳುತ್ತವೆ. ಅವರ ಪ್ರಕಟಣೆಗಳು ನೋಡಬೇಕು, ಅವರು ಒಂದಕ್ಕೆ ಎರಡರಷ್ಟು ಬಡ್ಡಿ ಕೊಡುತ್ತೇವೆಂದು ಹೇಳಿದಾಗಲೇ ನಮಗೆ ಗೊತ್ತಾಗುತ್ತದೆ ಇದು ಮೋಸದ ಸಂಸ್ಥೆ ಅಂತ. ಆಮೇಲೆ ಈಗಾಗಲೇ ಕಲ್ರೋಸ್ಕರ್ ಬಗ್ಗೆ ಹೇಳಿದರು. ದೊಡ್ಡ ದೊಡ್ಡ ಕಂಪನಿಗಳು ಸಹ ಈ ರೀತಿ ಮಾಡಿದ್ದಾವೆ. ಹೌಸಿಂಗ್ ಸೊಸೈಟಿ ಅಂತ ಮಾಡಿಕೊಳ್ಳುವುದು, ಸಾರ್ವಜನಿಕರಿಂದ ಹಣ ಸಂಗ್ರಹಣೆ ಮಾಡುವುದು ಅವರು ಲ್ಯಾಂಡ್ ಪರ್ಚೇಸ್ ಮಾಡಿರುವುದಿಲ್ಲ, ಸೈಟ್ ಮಾಡಿರುವುದಿಲ್ಲ, ನಾವು ಹೌಸಿಂಗ್ ಸೊಸೈಟಿ ಮಾಡುತ್ತೇವೆಂದು ದೊಡ್ಡ ದೊಡ್ಡ ಜಾಹೀರು ಪಾಕಿಕೊಳ್ಳುವುದು, ಅವರಿಗೆ ಬೇಕಾದವರನ್ನು ಸೇರಿಸಿಕೊಂಡು ಒಂದು ಕಂಪನಿ ಅಂತ ಮಾಡಿಕೊಳ್ಳುವುದು, ಅವರು ಚೆನ್ನಾಗಿ ಆಗುತ್ತಾರೆ. ಆ ಕಂಪನಿಯಲ್ಲಿ ಯಾರು ಡೈರೆಕ್ಟರ್ಸ್ ಇರುತ್ತಾರೆ, ಅವರು ಮಾಡುವ ಉದ್ದೇಶವೇ ಇದಕ್ಕೆ. ಮೊದಲು ಅವರು ಭದ್ರ ಆಗುವುದು ಆಮೇಲೆ ಯಾರಾದರೂ ಡಿಪಾಸಿಟರ್ಸ್ ಹೋಗಿ ಕೇಳಿದರೆ ಏನೋ ಒಂದಿಷ್ಟು ಹಣ ಕೊಡುತ್ತೇವೆ ತೆಗೆದುಕೊಂಡು ಹೋಗಿ ಅಂತ ಹೇಳುವುದು, ಇಂತಹ ಮೋಸ ಮಾಡುವ ಕಂಪನಿಗಳು ಹಲವಾರು ಇವೆ. ನಾನು ನಿಜವಾಗಿಯೂ ಸಂತೋಷಪಡುತ್ತೇನೆ ತಾವು ಒಳ್ಳೆಯ ಮಸೂದೆ ತಂದಿದ್ದೀರಿ. ಈ ಮಸೂದೆಯು ಬಹಳ ತೀವ್ರತರವಾಗಿ ಕಾರ್ಯಾಚರಣೆ ಆಗಬೇಕಾಗುತ್ತದೆ. ಇಂತಹ ಕಂಪನಿಗಳು ಏನು ಇವತ್ತು ಹುಟ್ಟಿಕೊಂಡಿವೆ ಇವುಗಳನ್ನು ಮಟ್ಟ ಹಾಕಲಿಕ್ಕೆ ಈ ಮಸೂದೆ ಸಹಾಯಕವಾಗುತ್ತದೆ. ಅವರು ಸಿಸ್ಟಮ್ಯಾಟಿಕ್ ಆಗಿ ನಡೆದುಕೊಂಡು ಹೋಗಲಿ ನಮ್ಮದೇನೂ ಅಭ್ಯಂತರವಿಲ್ಲ. ಇಂತಹ ಸಂಸ್ಥೆಗಳಿಗೆ ಯಾವುದೇ ರೂಪುರೇಷೆ ಇಲ್ಲ, ರಿಜಿಸ್ಟ್ರೇಷನ್ ಇಲ್ಲ ಆಥವಾ ಯಾವುದೇ ಒಂದು ನಾರಮ್ಸ್ ಇಲ್ಲ. ಇನ್ನು ಮುಂದೆ ಇಂತಹ ಕಂಪನಿಗಳಿಗೆ ಅವಕಾಶಗಳು ಸಿಗದೇ ಇರುವ ರೀತಿಯಲ್ಲಿ, ಈ ಮಸೂದೆ ಜಾರಿಗೆ ಬರಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನು ನಾವು ಕೇಳಿದೆವು. ಅನೇಕ ಚಿಟ ಫಿಪಾಸಿಟ್ ಇಟ್ಟವರು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ನಾವು ಪತ್ರಿಕೆಗಳಲ್ಲಿ ನೋಡಿದ್ದೇವೆ. ಮತ್ತು ದುಡ್ಡು ಇಟ್ಟವರನ್ನು ಸಾಕಷ್ಟು ಹಿಂಸಿಸುವುದು ಮತ್ತು ಇಂತಹ ಸಂಸ್ಥೆಗಳಿಂದ ಸಾಲ ಪಡೆದವರಿಗೆ 10 ಪರ್ಸೆಂಟ್ ಇಂಟ್ರೆಸ್ಟ್ ಕೇಳುವಂಥಾದ್ದು ಇಂತಹ ಅವ್ಯವಹಾರಗಳು ನಡೆಯುತ್ತವೆ. ಅದೇ ರೀತಿಯಲ್ಲಿ ಇವತ್ತು ನಡೆಯುತ್ತಿರುವಂಥ ಮಟ್ಟಿ ಇರಬಹುದು, ಲೈವ್‌ಸ್ಟಾಂಡ್ ಇರಬಹುದು, ಇವತ್ತು ನಡೆಯುತ್ತಾ ಇರುವಂಥ ಇಸ್ಪೀಟ್, ಜೂಜು ಇರಬಹುದು, ಅದೇ ರೀತಿಯಲ್ಲಿ, ರೇಸ್ ಇರಬಹುದು, ಇವೆಲ್ಲಾ ಇವತ್ತು ಚಿನ್ನವನ್ನು ಹಾಳು ಮಾಡುವಂತಹ ಕಾರ್ಯಗಳು. ನಾವು ತಂದಿರತಕ್ಕಂಥ ಮಸೂದೆ ಬಹಳ ಚಿನ್ನಾಗಿದೆ. ಪ್ರಾಧೀಕಾರ ಮಾಡಿ, ಪೋಲೀಸ್‌ನವರು ಜಪ್ತಿ ಮಾಡುವಂಥಾದ್ದು, ಮತ್ತು ಅವರಿಗೆ ಶಕ್ತಿ ಕೊಡುವಂಥಾದ್ದು ಈ ರೀತಿ ಕ್ರಮ ಬದ್ಧವಾಗಿ ಇದನ್ನು ತೆಗೆದುಕೊಂಡು ಬಂದಿದ್ದಾರೆ. ಈ ಮಸೂದೆಯ ವ್ಯಾಪ್ತಿಗೆ ಸೇರಿಸಿಕೊಳ್ಳುವಂತಹ ಅಂಶಗಳು ಸಾಕಷ್ಟು ಇವೆ. ಬರೀ ಡಿಪಾಸಿಟರ್ಸ್ ಅಲ್ಲ. ಈ ಮಸೂದೆಯ ಕಾರ್ಯಾಚರಣೆ ಬಹಳ ತೀವ್ರವಾಗಿ ಆಗಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬಸ್ತಿಪೇಟೆ) :— ಮಾನ್ಯ ಅಧ್ಯಕ್ಷರೇ, ನಾನು ಈ ಮಸೂದೆಯನ್ನು ಸ್ವಾಗತ ಮಾಡುತ್ತೇನೆ. ಈ ಮಸೂದೆಯಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವಂಥಾದ್ದನ್ನು ತಿಳಿಸಿದ್ದಾರೆ. ಇವತ್ತು ಅನೇಕ ಜನ 5 ಆಥವಾ 7 ಜನರನ್ನು ಸೇರಿಸಿಕೊಂಡು ಒಂದು ಕೋ-ಆಪರೇಟಿವ್ ಸೊಸೈಟಿ ಅಂತ ಮಾಡಿ ರಿಜಿಸ್ಟ್ರೇಷನ್ ಮಾಡುತ್ತಾರೆ. ಅವರಿಗೆ ಎಷ್ಟು ಹಣ ಬೇಕೋ ಅಷ್ಟು ಹಣ ಮಾಡಿಕೊಂಡು ಅವರು ಆ ಸಂಸ್ಥೆಯನ್ನು ಮುಚ್ಚಿ ಪುನ: ಅವರೇ ಬೇರೆ ಕಡೆ ಹೋಗಿ ಇನ್ನು 4-5 ಜನರನ್ನು ಸೇರಿಸಿಕೊಂಡು ಅವರೇ ಒಂದು ಸಂಸ್ಥೆಯನ್ನು ಪ್ರಾರಂಭ ಮಾಡುತ್ತಾರೆ. ಅವನ್ನು ತಡೆಗಟ್ಟಲು ತಾವು ರೂಲ್ಸ್‌ನಲ್ಲಿ ಯಾವ ರೀತಿ ಮಾಡಬೇಕೆನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಆಮೇಲೆ ಯಾರು ಇವತ್ತು ಹಣವನ್ನು ಕಳೆದುಕೊಂಡಿದ್ದಾರೆ ಅದು ಶೆಲ್ಟೋಸ್ಕರ್ ಇರಬಹುದು ಬೇರೆ ಬೇರೆ ಸಂಸ್ಥೆಗಳಿಂದ ಇರಬಹುದು, ಅವರು ಏನಾದರೂ ಆಸ್ತಿಪಾಸ್ತಿಯನ್ನು ಬೇನಾಮಿ ಹೆಸರಿನಲ್ಲಿ ಇಟ್ಟಿದ್ದರೆ ಅದನ್ನು ಮುಟ್ಟುಗೋಲು ಹಾಕಿಕೊಂಡು ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇರಬೇಕು. ಯಾರ್ಯಾರು ಅಲ್ಲಿ ದುಡ್ಡಿಟ್ಟು

ಕಳೆದುಕೊಂಡಿರುವರೋ ಅಂಥವರಿಗೆ ಸಹಾಯ ಮಾಡುವ ಸಾಧ್ಯತೆ ಇದೆಯೇ ಅಂತ ತಾವು ಪರಿಶೀಲನೆ ಮಾಡಬೇಕು. ಮೊದಲನೆಯದಾಗಿ ಇವತ್ತು ರಿಸಾಟ್ಸ್ ಅಂತ ಮಾಡಿಕೊಳ್ಳುತ್ತಾರೆ, ಅದನ್ನು ಮಾಡುವಾಗ ಜಾಹೀರಾತು ಕೊಡುತ್ತಾರೆ. ಇಷ್ಟು ಹಣ ಕಟ್ಟಿದರೆ ಇಷ್ಟಿಷ್ಟು ಆಗಿಬಿಡುತ್ತದೆ ಅಂತ. ಇವರು ಹೊರರಾಷ್ಟ್ರಗಳಲ್ಲಿರುವ ರಾಜ್ಯದ ಜನರಿಂದಲೂ ಹಣ ಪಡೆಯುವ ನಿರ್ದೇಶನಗಳಿವೆ. ಇದಕ್ಕೆ ಕಾನೂನಿನಡಿ ಏನಾದರೂ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕಾಗುತ್ತದೆ. ಮಾನ್ಯ ಸಚಿವರು ತಂದಿರುವ ವಿಧೇಯಕವೇನಿದೆ ಅದರ ಉಪಯುಕ್ತತೆ ಜಾಸ್ತಿ ಇದೆ. ಅದರ ಸಾಧ್ಯಾಸಾಧ್ಯತೆಗಳನ್ನು ನೋಡಿದಾಗ ಯಾವುದಾದರೂ ಒಬ್ಬರು ನಿಖರವಾಗಿ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಳ್ಳಲು ಇದಕ್ಕೆ ಮುಂದೆ ಬರದೇ ಹೋದರೆ, ಪೋಲೀಸರಿಗೇ ಇದನ್ನು ವಹಿಸಬಹುದು, ಇಲ್ಲ ತಮ್ಮ ಇಲಾಖೆ ವ್ಯಾಪ್ತಿಗೆ ಒಳಪಡಿಸಬಹುದು ಇಲ್ಲ ಸಹಕಾರ ಇಲಾಖೆಗೆ ವಹಿಸಬಹುದು- ಇಂಥವರಿಗೆ ಕಡಿವಾಣ ಹಾಕುವ ಬಗ್ಗೆ ಬೇಕಾದ ರೂಲ್ಸ್‌ಗಳನ್ನು ಮಾಡಿ. ರಾತ್ರೋರಾತ್ರಿ ಇವರೆಲ್ಲ ತಮ್ಮ ಮೆಂಬಾಟನ್ನು ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಇದೆ. ಇಂಥವರಿಗೆ ಏನಾದರೂ ಕಠಿಣ ಕ್ರಮ ಕೈಗೊಂಡು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ರೂಲ್ಸ್‌ಗಳನ್ನು ಅಳವಡಿಸಿ ಅದರಡಿ ಅವುಗಳ ಬಗ್ಗೆ ಕ್ರಮ ತೆಗೆದುಕೊಳ್ಳುವುದನ್ನು ಮಾಡಿದಾಗ ಇದು ಉಪಯುಕ್ತ ವಿಧೇಯಕವಾಗುತ್ತದೆ. ವಿಶೇಷವಾಗಿ ಮಧ್ಯಮ ವರ್ಗದವರಿಗೆ ಇದರಿಂದ ಅನುಕೂಲವಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಅಧ್ಯಕ್ಷರೇ, ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ-2000 ಇದನ್ನು ಅಧ್ಯಯನ ಮಾಡಿದರೆ, ಡಿಪಾಸಿಟರ್ಸ್‌ಗೆ ಕೊಡಬೇಕಾದ ಪ್ರಾಧಾನ್ಯತೆ ಬಗ್ಗೆ ಇಲ್ಲಿ ಉಲ್ಲೇಖ ಮಾಡಿಲ್ಲ. ನನ್ನ ಕ್ಷೇತ್ರ ಮಂಗಳೂರಿನಲ್ಲಿ, ನಾನ್-ಬ್ಯಾಂಕಿಂಗ್ ಸಂಸ್ಥೆಗಳಲ್ಲಿ ಠೇವಣಿ ಹೂಡಿದ್ದ ಒಂದು ಸಾವಿರ ಜನರ ಸಭೆ ಕರೆದಿದ್ದೆ; ಬಂದವರಲ್ಲಿ 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರು 80 ಪರ್ಸೆಂಟ್ ಇದ್ದರು ತಮ್ಮ ಮಗಳ ಮದುವೆ ಕಾರಣಕ್ಕೋ ಅಥವಾ ಬರುವ ಇಂಟರೆಸ್ಟ್‌ನಿಂದ ಒಳ್ಳೆಯ ಜೀವನ ನಡೆಸಬಹುದೆಂದು ಠೇವಣಿ ಮಾಡಿದ್ದ ಬಹಳ ಮಂದಿ ಇದ್ದರು. ಆ ಸಭೆಯಲ್ಲಿ ಆದ ಎಲ್ಲ ನಿರ್ಣಯಗಳ ಆಧಾರದಲ್ಲಿ ನಾನು ವಿನಂತಿಸುವುದು: ಕಂಪನಿಗಳಿಂದ ಹಣ ಕಳೆದುಕೊಂಡರೆ ಕಂಪನಿಗಳ ಮೇಲೆ ಅವಿಶ್ವಾಸ ಮಾಡಿದ್ದೀರಿ, ಆದೆ ಅವರು ಮ್ಯಾನೇಜ್‌ಮೆಂಟನ್ನೇ ಚೇಂಜ್ ಮಾಡಿಬಿಡುತ್ತಾರೆ. ಹೊಸ ಮ್ಯಾನೇಜ್‌ಮೆಂಟ್ ಮೇಲೆ ನಾವು ಕ್ರಮ ತೆಗೆದುಕೊಳ್ಳುವಂತಿಲ್ಲ, ಮ್ಯಾನೇಜ್‌ಮೆಂಟ್ ಚೇಂಜಾಗಿದೆ ಅಂತಹ ಸಂದರ್ಭದಲ್ಲಿ ಏನು ಮಾಡುವಿರಿ? ಅಂಥವರಿಗೆ ಕಾನೂನು ಕ್ರಮ ಜರುಗಿಸಲು ಇದರಲ್ಲಿ ಸೇರಿಸಬೇಕು. ಎರಡನೆಯದು, ಕಂಪೆನಿಗಳು ಇರಲಿ ಮುಳುಗಲಿ, ನಾನು ಇಷ್ಟೇ ಹೇಳುವುದು: ಏಮ್ ಕಮರೇಜನ್ನು ಕಡ್ಡಾಯವಾಗಿ ಠೇವಣಿದಾರರ ಮೇಲೆ ಇನ್ ಸಿಸ್ಟ್ ಮಾಡುವುದು, ಹಾಗೆ ಮಾಡಿದರೆ, ಆಕಸ್ಮಾತ್ ಕಂಪನಿ ಹಾಳಾದರೆ ಅವರು ಇನ್‌ವೆಸ್ಟ್ ಮಾಡಿದ ಹಣವಾದರೂ ಹಿಂದಕ್ಕೆ ಬರುತ್ತದೆ.

ಅಧ್ಯಕ್ಷರು :— ಇಂಥದನ್ನೆಲ್ಲ ಇನ್‌ಶೂರೆನ್ಸ್ ಮಾಡುವರೇ?

ಶ್ರೀ ಎನ್. ಯೋಗೀಶ್ ಭಟ್ :— ಮಾಡಬೇಕು. ತಮಿಳುನಾಡಿನಲ್ಲಿ ಇಂಥದ್ದು ಮಾಡಿದ್ದಾರೆಂಬ ಮಾಹಿತಿ ನನ್ನ ಬಳಿ ಇದೆ.

ಅಧ್ಯಕ್ಷರು :— ಸರ್ಕಾರಕ್ಕೆ ಆ ಮಾಹಿತಿ ಕಳಿಸಿಕೊಡಿ.

ಶ್ರೀ ಎನ್. ಯೋಗೀಶ್ ಭಟ್ :— ನನ್ನ ಬಳಿ ಇದ್ದರೆ ಕಳಿಸಿಕೊಡುತ್ತೇನೆ. ಅಂಥ ವಿಧಿವಿಧಾನ ಮಾಡಿದರೆ ಮಾತ್ರ ಠೇವಣಿದಾರರಿಗೆ ಸೇಫ್ಟಿ ಬರಲು ಸಾಧ್ಯ. ಮತ್ತೆ ಟ್ರಾನ್ಸ್‌ಫರ್‌ಗೆ ಸಂಬಂಧಿಸಿಂದತೆ ಇನ್ನೊಂದು ಮಾಹಿತಿ ಇಲ್ಲಿ ಕೊಟ್ಟಿದ್ದಾರೆ. ದುರ್ಭಾವನೆಯಿಂದ ವರ್ಗಾವಣೆ ಪಡೆದವನ ಸ್ಥಿತಿಗೆ ಜಪ್ತಿ ಅಂತ. ಆದರೆ ಇದನ್ನು ಡಿಫೈನ್ ಮಾಡುವವರು ಯಾರು? ಇದನ್ನು ಡಿಫೈನ್ ಮಾಡುವುದರಲ್ಲೇ ಸಾಕಷ್ಟು ಆಗಿಹೋಗುತ್ತದೆ. ಆದ್ದರಿಂದ ಈ ಅಂಶದಲ್ಲಿ ನ್ಯಾಯ ಸಿಗುತ್ತದೆ ಎಂಬ ಬಗ್ಗೆ ನನಗೆ ಸಂಶಯವಿದೆ. ಇದರ ಬಗ್ಗೆ ಸ್ಪಷ್ಟೀಕರಣ ಕೇಳುತ್ತೇನೆ. ಇನ್ನೊಂದು ಸಲಹೆ ಏನೆಂದರೆ ಡಿಪಾಸಿಟರ್ಸ್ ತಮ್ಮ ಹಣ ಕಳೆದುಕೊಂಡ ಸ್ಥಿತಿಯಲ್ಲಿ ಕೋರ್ಟಿಗೆ ಹೋಗಿ ನ್ಯಾಯ ಕೇಳುವ ಸ್ಥಿತಿಯಲ್ಲೂ ಇರುವುದಿಲ್ಲ, ಹಣವೂ ಇರುವುದಿಲ್ಲ. ಆ ಸಂದರ್ಭದಲ್ಲಿ ಅವರಿಗೆ ಉಚಿತ ಕಾನೂನು ನೆರವು ಕೊಡಲು

ಸಾಧ್ಯವೇ? ರಿಕವರಿಯಾದ ಮೇಲೆ ಮಸೂಲು ಮಾಡಲು ಏನಾದರೂ ಪ್ರಾವಿಶನ್ ಇಟ್ಟುಕೊಳ್ಳಲಿ. ಅಂಥ ಸಂದರ್ಭದಲ್ಲಿ ಉಚಿತ ಕಾನೂನಿನ ನೆರವು ಕೊಟ್ಟಲ್ಲಿ, ಅವರಿಗೆ ನೆಮ್ಮದಿಯಾದರೂ ಸಿಗಬಹುದು. ಏನಾದರೂ ಹೆಲ್ಪ್ ಮಾಡಿ ಎಂದು ಅನೇಕರು ನನ್ನ ಬಳಿ ಬರುತ್ತಾರೆ. ಪೋಲಿಸ್ ಇಲಾಖೆಯಿಂದ ಆಗುತ್ತಿಲ್ಲ, ಸಿವಿಲ್ ಎಂದು ಜಾರಿ ಕೊಳ್ಳುತ್ತಿದ್ದಾರೆ. ಇಂಥ ಸಲಹೆಗಳನ್ನೂ ಇದರಲ್ಲಿ ಸೇರಿಸಿಕೊಂಡು ಆ ಬಿಲ್ಲನ್ನು ಇನ್ನೂ ಸಶಕ್ತವಾಗಿ ತರಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಈಗಿನ ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಇದೇ ಉದಾಹರಣೆ ಕೊಟ್ಟು ನಾನು ಉಲ್ಲೇಖ ಮಾಡಿದ್ದೆ. ಆನಂತರ ಕನಿಷ್ಟ ಒಂದು ವರ್ಷದ ನಂತರವಾದರೂ ಈ ಮಸೂದೆ ಸ್ವಾಗತ ಮಾಡುತ್ತಿದ್ದೇನೆ. ಇದು ಶೀಘ್ರದಲ್ಲೇ ಅನುಷ್ಠಾನಕ್ಕೆ ಬರಲಿ ಎಂದು ಹಾರೈಸುತ್ತಿದ್ದೇನೆ. ಧನ್ಯವಾದಗಳು.

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) :— ಮಾನ್ಯ ಅಧ್ಯಕ್ಷರೇ, ಕರ್ನಾಟಕ ಹಣಕಾಸು ಸಂಸ್ಥೆಗಳ ಠೇವಣಿದಾರರ ಹಿತಾಸಕ್ತಿ ಮತ್ತು ಸಂರಕ್ಷಣಾ ವಿಧೇಯಕವನ್ನು ಇವತ್ತು ಮಂಡಿಸಿದ್ದಾರೆ. ಇದು ಒಳ್ಳೆಯ ವಿಧೇಯಕ. ಆದರೆ ಇದು ಪೋಸ್ಟ್‌ಮಾರ್ಟಂ ವಿಧೇಯಕ. ಊರೆಲ್ಲ ಹಾಳಾಗಿ ಹೋದಮೇಲೆ ಕೋಟೆ ಬಾಗಿಲು ಹಾಕಿದರು ಎಂಬಂತೆ ಆಗುತ್ತಾ ಇದೆ ಅಷ್ಟೇ. ಬೇರೆ ಏನೂ ಇದರಿಂದ ಸಾಧನೆ ಆಗುವುದಿಲ್ಲ.

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ಇಂಥದನ್ನೆಲ್ಲ ನಿಯಂತ್ರಣ ಮಾಡೋಣ ಎಂಬ ಸದುದ್ದೇಶದಿಂದ ಇದನ್ನು ತರುವ ಸಂದರ್ಭದಲ್ಲೇ ನೀವು ಹಾಗೆ ಹೇಳಿಬಿಟ್ಟರೆ....

ಶ್ರೀ ಕೆ.ಬಿ. ಮಲ್ಲಿಕಾರ್ಜುನ :— ಇದು ಇನ್ನೂ ಶಕ್ತಿಯುತವಾಗಬೇಕೆಂದು ಹೇಳುತ್ತಿದ್ದೇನೆ. ಏತಕ್ಕೆಂದರೆ ಠೇವಣಿ ಪಡೆದಿದ್ದ ಕಂಪನಿಗಳು ಪೂರ್ತಿ ಹಾಳಾಗಿಹೋದ ಮೇಲೆ ಠೇವಣಿ ಹಿಂತಿರುಗಿಸಲಾಗುವುದಿಲ್ಲ, ಎಂದು ಹೇಳುತ್ತಿರುವುದು. ಅದಕ್ಕೆ ನನ್ನ ಎರಡು ಮೂರು ಸಲಹೆಗಳು. ನೀವು ವ್ಯಾಪಕವಾಗಿ ಚರ್ಚೆ ಮಾಡಿ ತರಬೇಕಾಗಿತ್ತು. ನಮ್ಮ ಡಿಸಿಸಿ ಬ್ಯಾಂಕ್ ನಂತರ ಸಹಕಾರಿ ಸಂಸ್ಥೆಗಳಿವೆ. ಅವುಗಳಿಗೆ ಕೊಟ್ಯಾಂತರ ಠೇವಣಿ ಎತ್ತಲು ಆರ್‌ಬಿಐ ಆಗಲಿ ಸರ್ಕಾರವಾಗಲಿ ಅನುಮತಿ ಕೊಡುತ್ತಿಲ್ಲ. ಎಷ್ಟು ಆಸ್ತಿ ಇದೆಯೋ ಅದನ್ನು ಆಧರಿಸಿ ಎಷ್ಟು ಠೇವಣಿ ಸಂಗ್ರಹಿಸಬಹುದೆಂಬ ಆದೇಶ ಕೊಡುತ್ತಾರೆ. ಆದೇ ರೀತಿ ಈ ಸಂಸ್ಥೆಗಳನ್ನು ಶ್ರೀಮಂತಿಕೆಯಾಗಿ ಬೇನಾಮಿ ಹೆಸರಿನಲ್ಲಿ ಮಾಡುತ್ತಾರೆ. ದೊಡ್ಡ ಮನುಷ್ಯರು ಠೇವಣಿ ಸಂಗ್ರಹಿಸುತ್ತಾರೆ ನನ್ನ ಮಗನ ಹೆಸರಿನಲ್ಲಿ, ಇದು ಇದೆ, ಅಂದರೆ ಅವರ ಪಾರ್ಟ್‌ನರ್ ಹೆಸರಿನಲ್ಲಾಗಲಿ ಅವರ ಹೆಸರಿನಲ್ಲಾಗಲಿ ಏನೂ ಇರುವುದಿಲ್ಲ. ಪಾರ್ಟ್‌ನರ್ ಹೆಸರಿನಲ್ಲಿ ಒಂದು ರೂಪಾಯಿ ಇರುವುದಿಲ್ಲ ಅಂಥವರನ್ನು ಪಾರ್ಟ್‌ನರ್ ಮಾಡಿಕೊಂಡು ದುಡ್ಡು ಹೊಡೆಯುವ ಯೋಜನೆಯಿಂದ ಸಂಸ್ಥೆಗಳು ಹುಟ್ಟುತ್ತವೆ. ಅದಕ್ಕೇ ನನ್ನ ಪ್ರಥಮ

ಸಲಹೆಯೆಂದರೆ ಈ ಕಂಪನಿಗಳು ರಿಜಿಸ್ಟರ್ ಆಗಬೇಕಾದರೆ ಎಷ್ಟು ದೇಣಿಗೆ ಸಂಗ್ರಹಿಸಬಹುದೆಂದು ಸರ್ಕಾರದಿಂದ ಅನುಮತಿ ಪಡೆಯಬೇಕು. ಅದಕ್ಕಿಂತ ಹೆಚ್ಚಿಗೆ ದೇಣಿಗೆ ಕಲೆಕ್ಟ್ ಮಾಡಲು ಅವಕಾಶ ಕೊಡಬಾರದು. ಉದಾಹರಣೆಗೆ ಹೇಳುವುದಾದರೆ ಸಂಸ್ಥೆಯ ಪಾರ್ಟ್‌ನರ್ ಹೆಸರಿನಲ್ಲಿ ಎರಡು ಲಕ್ಷ ರೂಪಾಯಿ ಆಸ್ತಿ ಇರುತ್ತದೆ ಅಂತಿಟ್ಟುಕೊಳ್ಳಿ, ಆದರೆ ದೇಣಿಗೆ ಒಂದು ಕೋಟಿ ಸಂಗ್ರಹಿಸಿಬಿಡುತ್ತಾರೆ. ಒಂದು ಉದಾಹರಣೆ ಹೇಳುತ್ತೇನೆ: ಬಿಳಿಮಗಳೂರಿನಲ್ಲಿ ಆರ್ಡಿ ಕ್ಯೂರರ್ಸ್ ಅಂತ, ಅದಕ್ಕೆ ಆಂಧ್ರದಿಂದ ಒಬ್ಬ ಪಾರ್ಟ್‌ನರ್ ಕರ್ನಾಟಕದಿಂದ ಇಬ್ಬರು ಪಾರ್ಟ್‌ನರ್ಸ್, ಸುಮಾರು 30 ಕೋಟಿ ಸಂಗ್ರಹಿಸಿದ್ದಾರೆ; ಐದು ರೂಪಾಯಿ ಬಡ್ಡಿಗೆ ಕೊಡುತ್ತೇವೆ ಅಂತ. ಈಗ ಎಲ್ಲ ಷೇರುಹೋಲ್ಡರ್‌ಗೆ ವಾಪಸ್ಸು ಕೊಡಬೇಕಾದ್ದು 17 ಕೋಟಿ ಬಾಕಿ ಇದೆ. ಎಲ್ಲ ಪಾರ್ಟ್‌ನರ್ಸ್‌ಗಳ ಆಸ್ತಿ ಮಾರಿದರೂ ಸಿಗುವುದು ಕೇವಲ 4 ಕೋಟಿ ಮಾತ್ರ. ಇನ್ನು 16 ಕೋಟಿಗೆ ಯಾರ ಆಸ್ತಿ ಜಪ್ತಿ ಮಾಡುವುದು? ಅದಕ್ಕೋಸ್ಕರವೇ ಹೇಳಿದ್ದು ಇದು ಪೊಲಿಟಿಮಾರ್ಟಮ್ ಬಿಲ್ ಆಗುತ್ತದೆ. ಎಲ್ಲರೂ ಬುದ್ಧಿವಂತರು. ಯಾರು ಹಣ ಹೂಡಿಯಬೇಕೆಂದು ಆಸೆ ಇಟ್ಟುಕೊಂಡಿರುತ್ತಾನೆ, ಆತ ಹಣ ಹೇಗೆ ನುಂಗಬೇಕೆಂದು ತಿಳಿದುಕೊಂಡೇ ಫೆನಾನ್ಸಿಗಳನ್ನು ಮಾಡುವುದು. ಆದ್ದರಿಂದ ಇದಕ್ಕೆ ಒಂದು ತಿದ್ದುಪಡಿ ಆದರೂ ತನ್ನಿ ಇಲ್ಲಾಂದರೆ ಇನ್ನೊಮ್ಮೆ ಪರಿಶೀಲನೆ ಮಾಡಿ. ಸರ್ಕಾರಿ ಸಂಸ್ಥೆಗಳಲ್ಲಿರುವ ವ್ಯವಸ್ಥೆಯಂತೆ ಅವರ ಆಸ್ತಿ ಎಷ್ಟಿದೆ ಅದಕ್ಕೆ ಪೂರಕವಾಗಿ 30 ಪರ್ಸೆಂಟೊ ಅಥವಾ 50 ಪರ್ಸೆಂಟೋ ದೇಣಿಗೆ ಸಂಗ್ರಹಿಸಬೇಕೆಂಬ ವ್ಯವಸ್ಥೆ ನೀವು ಮೊದಲಿಗೆ ಮಾಡಬೇಕು. ಇದು ಮಾಡದೇ ಹೋದರೆ ಇದೆಲ್ಲ ನಿರರ್ಥಕ. ಇನ್ನೊಂದು, ಕೊಟ್ಟಾದಮೇಲೆ ಆ ದೇಣಿಗೆಗೆ ಇನ್ಶೂರೆನ್ಸ್ ಮಾಡಿಸುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ದುಡ್ಡನ್ನೆಂತೂ ಮಾಪಸ್ ಕೊಡಲು ಆಗುವುದೇ ಇಲ್ಲ. ಇಲ್ಲಿ ಅಗ್ರೀನಲ್ಲಿ ನಿಮಗೆ ಹೇಳಲಾಗಿದ್ದು ಅಂದರೆ ಯಾವರೀತಿ ಜಪ್ತಿ ಮಾಡಬೇಕು ಯಾವರೀತಿ ಕ್ರಮ ತೆಗೆದುಕೊಳ್ಳಬೇಕೆಂಬುದೆಲ್ಲ ಇದೆ. ಆದರೆ ಮುಂಚೆ ಮಾಡಬೇಕಾದ ಕೆಲಸಗಳೇನು ಎಂಬುದು ಇದರಲ್ಲಿ ಇಲ್ಲ. ಎರಡನೆಯದು ಪಾರ್ಟ್‌ನರ್ಸ್ ಯಾರು ಎಂಬುದು. ಇಷ್ಟು ಸಹಕಾರ ಸಂಘಗಳ ರಿಜಿಸ್ಟ್ರಾರ್ ರಿಜಿಸ್ಟ್ರಾರಿಗೆ ಅರ್ಜಿ ಕೊಡುತ್ತೇವೆ ಪಾರ್ಟ್‌ನರ್ಸ್ ಬಗ್ಗೆ ಕೇಳಲು ಅವರಿಗೆ ಅಧಿಕಾರವೇ ಇಲ್ಲ. ಅದನ್ನು ಮೊದಲು ಜಾರಿಗೆ ತರಬೇಕಾಗುತ್ತದೆ. ಯಾವುದೇ ಸಂಸ್ಥೆ ರಿಜಿಸ್ಟರ್ ಮಾಡಿಸಬೇಕಾದರೂ ಆ ಪಾರ್ಟ್‌ನರ್ಸ್ ಯಾರು ಅವರೇನು ಅವರಿತ್ತ ಎಂದು ತಿಳಿದುಕೊಂಡು ಆಮೇಲೆ ರಿಜಿಸ್ಟರ್ ಎತ್ತಲು ಅನುಮತಿ ಕೊಟ್ಟರೆ ಮಾತ್ರ ಇದು ಕಾರ್ಯರೂಪಕ್ಕೆ ಬರುತ್ತದೆ ಇಲ್ಲದೆ ಇನ್ಯಾವುದೇ ಕಾರಣದಿಂದ ಇದು ಬರುವುದಿಲ್ಲ. ಇನ್ನು ಪ್ರತಿ ವರ್ಷ ಇನ್‌ಕಂಮ್ಟ್ಯಾಕ್ಸ್‌ಗೆ ರಿಟರ್ನ್ಸ್ ಫೈಲ್ ಮಾಡುತ್ತೇವೆ. ಇಲ್ಲಿ ಸಮಕ್ಷ ಪ್ರಾಧಿಕಾರವನ್ನು ನೇಮಿಕ ಮಾಡಬೇಕೆಂದು ಒಂದು ಕ್ಲಾಸ್ ಇದೆ. ಒಂದು ಕಾನೂನು ತರಬೇಕಾಗುತ್ತದೆ. ಪ್ರತಿ ವರ್ಷ ಯಾವುದಾದರೂ ಒಂದು ನಿಗದಿತ ಸಮಯದಲ್ಲಿ ಆ ಸಂಸ್ಥೆ ಏನಾಗಿದೆ ಎಂಬ ಪೂರ್ಣ ಮಾಹಿತಿಯನ್ನು ಆ ಸಮಕ್ಷ ಪ್ರಾಧಿಕಾರಕ್ಕೆ ಒಪ್ಪಿಸಬೇಕಾಗುತ್ತದೆ.

ಈಗಿನಂತೆ ಎಲ್ಲ ಹಾಳಾದಮೇಲೆ ಸಮಕ್ಷ ಪ್ರಾಧಿಕಾರ ಕ್ರಮ ಜರುಗಿಸಲು ಅವಕಾಶವಿದೆ ಅಷ್ಟೆ. ಅಂದರೆ ಮಾನಿಟರಿಂಗ್ ಇರಬೇಕಾಗುತ್ತದೆ. ಅಧ್ಯಾಯ 2 ಮೂರನೇ 'ಸಿ'

> 'ಅಂತಹ ಠೇವಣಿಗೆ ಪ್ರತಿಯಾಗಿ ಮಾಡಿದ ಸೇವೆಯನ್ನು ಒದಗಿಸಲು ತಪ್ಪಿದೆ ಎಂಬುದಾಗಿ ಠೇವಣಿದಾರರಿಂದ ದೂರು ಸ್ವೀಕರಿಸಿದ ಮೇಲೆ ಪದಾಂತಿತ ಪ್ರಾಧಿಕಾರಕ್ಕೆ ಮನದಟ್ಟಾದರೆ;
>
> 'ಎರಡನೆಯದು, ಯಾವುದೇ ಹಣಕಾಸು ಸಂಸ್ಥೆಯು ಠೇವಣಿದಾರರನ್ನು ವಂಚಿಸುವ ಉದ್ದೇಶದಿಂದ ವರ್ತಿಸುತ್ತಿದೆ ಎಂದು ಪದಾಂತಿತ ಪ್ರಾಧಿಕಾರಕ್ಕೆ ನಂಬಲು ಕಾರಣವಿದ್ದರೆ;

ಇಲ್ಲೇನಾಗುತ್ತದೆ ಅಂದರೆ ಅವನಿಗೇನು ಕನಸು ಬೀಳುತ್ತದೆಯೇ? ಇಂಥ ಸಂಸ್ಥೆ ಹಾಳಾಗುತ್ತಿದೆ, ಏನಾದರೂ ಮಾಡಿ ನಾವು ಇದನ್ನು ನಿಯಂತ್ರಿಸಬೇಕೂಂತ? ಅದಕ್ಕೋಸ್ಕರ ಒಂದು ಇನ್ಸ್‌ಸ್ಟನ್ಸ್‌ನ್ನು ನೀವು ಇಲ್ಲಿ ತರಬೇಕಾಗುತ್ತದೆ. ಪ್ರತಿ ವರ್ಷ ಸಮಕ್ಷ ಪ್ರಾಧಿಕಾರಕ್ಕೆ ಆ ಸಂಸ್ಥೆಯಿಂದ ಬ್ಯಾಲನ್ಸ್ ಶೀಟ್ ಆಥವಾ ಆರ್ಥಿಕ ವರದಿ ಸಲ್ಲಿಸಲಿಕ್ಕೆ ಅವಕಾಶ ಇಲ್ಲಿ ಮಾಡಿಕೊಡಬೇಕಾಗುತ್ತದೆ. ಇನ್ನು ಅಷ್ಟೆನಲ್ಲಿ ಸಮಕ್ಷ ಪ್ರಾಧಿಕಾರಕ್ಕೆ ಸೂಮೋಟೋ ಕ್ರಮ ತೆಗೆದುಕೊಳ್ಳಲು ಅಧಿಕಾರವಿಲ್ಲ. ಅಸಿಸ್ಟೆಂಟ್ ಕಮಿಷನರ್ ನೇಮಿಸಬಹುದಂದಿದೆ ಆದರೆ ಅವನಿಗೆ ಅರ್ಜಿ ಬಂದ ಮೇಲೆ ಅಥವಾ ಅವನಿಗೆ ಮನದಟ್ಟಾದರೆ ಎಂಬುದು ಆಗುವುದಿಲ್ಲ. ಹಾಗಾಗಿ ಪ್ರತಿ ಸಮಕ್ಷ ಪ್ರಾಧಿಕಾರಕ್ಕೂ ಅಸಿಸ್ಟೆಂಟ್ ಕಮಿಷನರ್‌ಗೆ ಕಡಿಮೆ ಇರದವರನ್ನು ನೇಮಿಸಬೇಕೆಂದಿರುವಂತೆ ಅವನನ್ನು ನೇಮಿಸಿ ಅವನ ಸೂಪರ್‌ವಿಶನ್ ಒದಗಿಸಬೇಕಾಗುತ್ತದೆ. ಅಂದರೆ ಅವನಿಗೆ ಸುಮೋಟೊ ಕ್ರಮ ಜರಗಿಸುವ ಅಧಿಕಾರ ಕೊಡಬೇಕು. ಇನ್ನು ಚೀಟಿ ವ್ಯವಹಾರಗಳಿದು. ಇವ್ಯಾವೂ ರಿಜಿಸ್ಟರ್ ಆಗುವುದಿಲ್ಲ. ಈ ವಿಧೇಯಕದ ವ್ಯಾಪ್ತಿಗೆ ಬರುವುದಿಲ್ಲ. ಪೋಲಿಸ್ ಇಲಾಖೆ ಸಹಯೋಗದೊಂದಿಗೆ ಚೀಟಿ ವ್ಯವಹಾರ ನಡೆಯುವುದು ರಾತ್ರಿ 7, 8ರ ನಂತರವೇ. ಪ್ರತಿ ಪೋಲಿಸ್ ಆಫೀಸರ್‌ಗೂ ಇದು ಗೊತ್ತಿರುತ್ತದೆ. ಚೀಟಿ ಅಂದರೆ ಒಂದು ಲಕ್ಷದ್ದನ್ನು ಬರೀ 45 ಸಾವಿರ ಮನೆಗೆ ತೆಗೆದುಕೊಂಡು ಹೋಗುತ್ತಾರೆ ಇಂಥ ಪ್ರಾರಣಗಳನ್ನು ಪೋಲಿಸರ ಮೂಲಕ ನಿಯಂತ್ರಿಸಬೇಕಾಗುತ್ತದೆ. ಚೀಟಿ ನಡೆಯುವುದನ್ನೂ ರಿಜಿಸ್ಟರ್ ಮಾಡಿಸಬೇಕೆಂದು ಮಾಡಬೇಕು. ಇನ್ನೊಂದು ಸೂಮೋಟೊ ಆಗಿ ಕ್ರಮ ತೆಗೆದುಕೊಳ್ಳಬೇಕಾಗಿದ್ದರೆ, ಜಾಹೀರಾತುಗಳನ್ನು ಇವರು ಕೊಡುತ್ತಾರೆ; ನಾವಿಷ್ಟು ಬಡ್ಡಿ ಕೊಡುತ್ತೇವೆ, ಇಷ್ಟು ಮನೆ ಕಟ್ಟಿಕೊಡುತ್ತೇವೆ ಇಂತಿಂಥ ಸವಲತ್ತು ನಿಮಗೆ ಕೊಡುತ್ತೇವೆ ಅಂತ ಪತ್ರಿಕೆಗಳಲ್ಲಿ ಪ್ರತಿ ಕಂಪನಿಗಳೂ ಜಾಹೀರಾತು ಕೊಡುತ್ತಾರೆ. ಅದನ್ನು ನೋಡಿಯೇ ಜನ ಮುಗಿಬೀಳುವುದು. ಆ ಜಾಹೀರಾತು ಬರುತ್ತಿದ್ದ ಹಾಗೇನೆ ಯಾವ ವ್ಯಾಪ್ತಿಯಲ್ಲಿ, ಇಂಥ ಸಂಸ್ಥೆ ಬರುತ್ತದಲ್ಲ, ಅದರ ಸಮಕ್ಷ ಪ್ರಾಧಿಕಾರಿ ಯಾರಿದ್ದಾನೆ ಅವನು ಸೂಮೋಟೊ ಆಗಿ ಆ ಕಂಪನಿಯನ್ನು

ಕೇಳಬೇಕಾಗುತ್ತದೆ. ಇದೇನು ನೀನು ಹೀಗೆ ಜಾಹೀರಾತು ಕೊಟ್ಟಿರುವೆಯಲ್ಲ, ಇವರಿಂದ ನಿನ್ನ ಉದ್ದೇಶವೇನು? ಎಂದು ಕೇಳಬೇಕು. ಈ ಅಧಿಕಾರವನ್ನು ಸಮಕ್ಷ ಪ್ರಾಧಿಕಾರಕ್ಕೆ ಕೊಡಬೇಕು. ಇಷ್ಟು ಮಾಡಿದರೆ, ಅವರ ಜೊತೆಗೆ ಜಪ್ತಿ ಬಗ್ಗೆ ಇನ್ನೊಂದು ಹೇಳಿಬಿಡುತ್ತೇನೆ. 6ನೇ ಪೇಜ್‌ನಲ್ಲಿದೆ.

> 'ಪರಂತು ವಾಸ ಸ್ಥಳವನ್ನು ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟರು ನೀಡಿದ ಶೋಧನಾ ವಾರಂಟಿನ ಅಧಿಕಾರದ ಹೊರತಾಗಿ ಪ್ರವೇಶಿಸತಕ್ಕದ್ದಲ್ಲ' ಎಂದಿದೆ.

ಇದರಿಂದೇನು ಪ್ರಯೋಜನವಾಗುತ್ತದೆ? ಕೋರ್ಟಿಗೆ ಹೇಗಿ ಅಲ್ಲಿ ಕೇಸ್ ಹಾಕಿ ಅಲ್ಲಿಂದ ವಾರೆಂಟ್ ತೆಗೆದುಕೊಂಡು ಬರುವ ಹೊತ್ತಿಗೆ ಅವನು ಪೂರ್ತಿ ಮನೆ ಖಾಲಿ ಮಾಡಿರುತ್ತಾನೆ? ಹಾಗಾಗಿ ಸಮಕ್ಷವು ಪ್ರಾಧಿಕಾರಿಗೇ ಜಪ್ತಿ ಮಾಡುವ ಅಧಿಕಾರವನ್ನೂ ಕಲ್ಪಿಸಿಕೊಡಬೇಕಾಗುತ್ತದೆ. ಅವನಿಗೆ ಮನದಟ್ಟು ಆಗುತ್ತಿದ್ದಹಾಗೆಯೇ ಸೀಜ್ ಮಾಡಿ ಆಮೇಲೆ ಕೋರ್ಟಿನಿಂದ ವಾರೆಂಟ್ ತರಲಿ ಅದನ್ನು ಸೀಜ್ ಮಾಡುವ ಅಧಿಕಾರ ಅವನಿಗೆ ಕೊಡದೇ ಹೋದರೆ ಅದಕ್ಕೇನೂ ಅರ್ಥ ಬರುವುದಿಲ್ಲವೆಂದು ಹೇಳುತ್ತಾ, ಇನ್ನೊಂದು ಪೀನಲ್ ಕ್ಲಾಸ್ ಹೇಳಿದ್ದಾರೆ ಇಲ್ಲಿ, ಅಧ್ಯಾಯ 3ರಲ್ಲಿ 9ರದು. ಹಣಕಾಸಿನ ಸಂಸ್ಥೆಗಳಿಂದ ಮೋಸಪೂರ್ವಕ ತಪ್ಪೊಪ್ಪಿಕೆ. ಇವನಿಗೆ 10 ವರ್ಷದವರೆಗೆ ಕಾರಾಗೃಹ ಮತ್ತು ಒಂದು ಲಕ್ಷದ ಜುಲ್ಮಾನೆ. ಒಂದು ಲಕ್ಷ ಜುಲ್ಮಾನೆ ಕೊಡುವವರು ಯಾರೂ ಮೋಸ ಮಾಡಲು ಹೋಗುವುದೇ ಇಲ್ಲ. ಆದ್ದರಿಂದ ಜುಲ್ಮಾನೆ ಅಂಶದಿಂದ ಪ್ರಯೋಜನವೇನೂ ಆಗುವುದಿಲ್ಲವೆಂದು ಹೇಳುತ್ತ, ಇದಕ್ಕೆ ಪೂರಕವಾದ ಇನ್ನೊಂದು ಬಿಲ್ ತರಬೇಕೆಂದು ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕೆ.ಎಸ್. ಹನುಮೇಗೌಡ (ಹಾಸನ) :— ಮಾನ್ಯ ಅಧ್ಯಕ್ಷರೇ ಈ ವಿಧೇಯಕವನ್ನು ನಾನು ಜನತೆಯ ಪರವಾಗಿ ಸ್ವಾಗತಮಾಡುತ್ತೇನೆ. ಈ ವಿಧೇಯಕ ಪರಿಣಾಮಕಾರಿಯಾಗಿ ಕೆಲಸ ಆಗಬೇಕಾದರೆ ಏನೇನು ಮಾಡಬೇಕೆಂಬ ಬಗ್ಗೆ ಇದುವರೆಗೂ ಮಾತನಾಡಿದ ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ಅವೆಲ್ಲ ಸೂಕ್ತವಾಗಿವೆ. ಮಾನ್ಯ ಸಚಿವರು ಅವನ್ನೆಲ್ಲ ಗಮನಿಸಿ ಸೂಕ್ತ ತಿದ್ದುಪಡಿ ಅಥವಾ ರೂಲ್ಸ್ ರೂಪಿಸುತ್ತಾರೆ ಎಂದು ತಿಳಿದಿದ್ದೇನೆ. ಇಂತಹ ವಿಷಯಗಳ ಬಗ್ಗೆ ಏನೂ ಮಾತನಾಡಿದರೆ ಹಾಸನ ನಗರದಲ್ಲಿ ಒಂದು ವರ್ಷದಲ್ಲಿ, ಇಂತಹ ಒಂದು ಸಂಸ್ಥೆ ಪ್ರಾರಂಭವಾಗಿ ಜನ ಹೇಳುವಂತೆ 150 ಕೋಟಿ ಅಲ್ಲದಿರಬಹುದು ನನಗೆ ಲೆಕ್ಕ ಸಿಕ್ಕಿರುವುದು 50-60 ಕೋಟಿ ಅಂತ. ಸುರೇಶ್ ಎಂಬ ಒಬ್ಬ ವ್ಯಕ್ತಿ, ಅವನೆಲ್ಲೋ ಬ್ಯಾಂಕಿನಲ್ಲಿ ಕೆಲಸದಲ್ಲಿದ್ದನಂತೆ. ಅಲ್ಲೇನು ತರಲೆ ತಾಪತ್ರಯ ಮಾಡಿಕೊಂಡನೋ ಅಥವಾ ಏನು ಆಸೆ ಬಂತೋ ಅಂತೂ ಆದಕ್ಕೆ ರಾಜೀನಾಮೆ

ಕೊಟ್ಟು ಒಂದು ಬೋರ್ಡ್ ಹಾಕಿದ; ಮಲೆನಾಡು ಫೈನಾನ್ಸ್ ಅಂಡ್ ಇನ್ವೆಸ್ಟ್‌ಮೆಂಟ್ ಅಂತ. ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ತೆಗೆದುಕೊಂಡ. ಅದನ್ನು ಬಹಳ ಚೆನ್ನಾಗಿ ಸಿಂಗಾರ ಮಾಡಿದ. ಇಂದ್ರನ ಸಭೆ, ನಾಟ್ಯ ಅದೂ-ಇದೂ ಮಾಡುವರು ಎಂದು ನಾವು ಓದಿದ್ದೇವಲ್ಲ ಪುರಾಣದಲ್ಲಿ, ಆ ತರಹ ವ್ಯವಸ್ಥೆ ಆಗಿಹೋಯಿತು. ಆಮೇಲೆ ಕೆಲವರು ಹಾಗೂ-ಹೀಗೂ ಬಂದು ಕೇವಣಿ ಮಾಡಿದರು. ಸ್ವಲ್ಪ ಹಣವೂ ಬರುವುದಕ್ಕೆ ಶುರುವಾಯಿತು. ಆಮೇಲೆ ಏಳೆಂಟು ಚಿಕ್ಕವಯಸ್ಸಿನ ಚೆನ್ನಾಗಿರುವ ಹೆಣ್ಣುಮಕ್ಕಳನ್ನು ಕೂಡ ನೇಮಿಸಿಕೊಂಡಿದ್ದನಂತೆ. ಹೋದ ತಕ್ಷಣ ಒಬ್ಬೊಬ್ಬರಿಗೆ ಒಂದೊಂದು ಪಾರ್ಟ್ ಆ ಹೆಣ್ಣುಮಕ್ಕಳದು. ಅಲ್ಲಿ ಹೋದರೆ ಮತ್ತೆ ಈಚೆಗೆ ಬರಬೇಕೂಂತ ಅನ್ನಿಸುತ್ತಿರಲಿಲ್ಲವಂತೆ.

ಶ್ರೀ ಕೆ.ಎಚ್ ರಂಗನಾಥ್ (ಅರಣ್ಯ ಸಚಿವರು) :— ಇದ್ದನಂತೆ ಎನ್ನುತ್ತೀರಿ, ಅದನ್ನೇಕೆ ಸರಿಯಾಗಿ ನೋಡಲಿಲ್ಲ, ನೀವು?

ಶ್ರೀ ಕೆ.ಎಚ್ ಹನುಮೇಗೌಡ :— ನನಗೆ 70 ವರ್ಷ ಸ್ವಾಮಿ. ನನಗೆ ಗೊತ್ತಾಗಲಿಲ್ಲ, ಕೊನೆಗೆ ಹೆಂಗಸರು ಮಕ್ಕಳು ಅಳುವುದಕ್ಕೆ ಶುರುಮಾಡಿದ ಮೇಲೇ ಗೊತ್ತಾಗಿದ್ದು. ಯಾವ ರೀತಿ ಮೋಸ ಮಾಡುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ ಇದನ್ನೆಲ್ಲ ಹೇಳುತ್ತಿರುವುದು ಆಮೇಲೆ ಶ್ರೀಮಂತರು ವಯಸ್ಸಾದವರು ದೈವಭಕ್ತರೆಲ್ಲ ಸೇರಿ ಗಣಪತಿ ಪೂಜೆಯನ್ನು ವಿಸರ್ಜನೆ ಮಾಡಿದರು. ಇವರೆಲ್ಲ ದುಡ್ಡು ಕೇಳಿದವರಲ್ಲ, 50, 100 ರೂ ಹುಟ್ಟುತ್ತಿತ್ತು, ಈ ರೀತಿ 5-10ಸಾವಿರ ಕಲೆಕ್ಷನ್ ಆಯಿತು. ಆಮೇಲೆ ಯಾರೋ ಸಲಹೆ ಮಾಡಿದರು ಮಲೆನಾಡು ಫೈನಾನ್ಸ್‌ಗೆ ಹೋಗಿ ಕೇಳೋಣ ಅಂತ, ಏಳೆಂಟು ಜನ ವಯಸ್ಸಾದವರು ವ್ಯಾಪಾರ ಮಾಡುವವರು ಹೋದರು ಸ್ವಾಮಿ. ದುಡ್ಡು ಕೊಡಿ ಅಂದರು, ಅವನು ಒಂದು ಚೆಕ್ ಕೊಟ್ಟ, ಅದು 50 ಸಾವಿರ ರೂಪಾಯಿಗಳ ಚೆಕ್. ಇವರಿಗೆ ಗಾಬರಿಯಾಬಿಟ್ಟಿತು, ಕೇಳಿದರು ಏನ್ರೀ ನಾವು ಕೇಳಿದ್ದೇ 200-300, 50 ಸಾವಿರ ಕೊಟ್ಟುಬಿಟ್ಟಿದ್ದೀರಲ್ಲ, ಅಂತ. ರೀ ನನ್ನ ಯೋಗ್ಯತೆ ಏನೂಂತ ತಿಳಿದಿದ್ದೀರಿ ನೀವು ಇದೇನು ಮಹಾನ್ರೀ, ಎಂದು ಆ ಮುದುಕರ ಮೇಲೆ ಜೋರುಮಾಡಿಬಿಟ್ಟ, ಆ ಮುದುಕರು ಹೆದರಿಹೋದರು. ಇನ್ನೇನಾದರೂ ದುಡ್ಡು ಬೇಕೇನ್ರಿ ಅನ್ನುಸಂತರ್ಪಣೆ ಮಾಡುತ್ತೀರೇನ್ರಿ ಬಡಬಗ್ಗರಿಗೆ ಅಂದ, ಒಂದು ಚೂರು ಮಾಡೋಣ ಅಂತ ಮಾಡಿದ್ದೀವಿ ಸ್ವಾಮಿ ಅಂದರು, ಅದಕ್ಕೆ 25 ಸಾವಿರ ಕೊಟ್ಟ. ಅಲ್ಲಿನ ವ್ಯವಸ್ಥೆ, ಆ ಹೆಣ್ಣುಮಕ್ಕಳು, ಅವರು ಕಾಣುವ ರೀತಿ ಇದನ್ನೆಲ್ಲ ನೋಡಿ ಇವರಿಗೆ ಅವನು ಅದೆಷ್ಟು ಕೋಟಿ ಇಟ್ಟಿದ್ದಾನೋ ಏನು ಚತೆಯೋ ಅಂತ. ಹಾಡಿಗೆ ಬೆಂಕಿ ಬಿದ್ದರೆ ಹರಡುತ್ತಂತಲ್ಲ ಇಡೀ ಹಾಸನ ಟೌನ್‌ನಲ್ಲ ಆ ರೀತಿ ಹರಡಿಹೋಗಿಬಿಟ್ಟಿತು. ಆಮೇಲೆ ಕೆಲವರು ದುಡ್ಡು ಕೊಡುವುದಕ್ಕೆ ಶುರುವಾದರು. ಆಮೇಲೆ ಕೆಲವರು ದುಡ್ಡು ತೆಗೆದುಕೊಳ್ಳುತ್ತೀರಿ, ಅದಕ್ಕೆ ರಸೀದಿ ಕೊಡಿ ಎಂದು ಕೇಳಿದರು. ಇನ್ನು ನಾಲ್ಕು ದಿನದಲ್ಲಿ ಕೊಡುತ್ತೇನೆ, ಅದಕ್ಕೂ ನೀವು ಯೋಚನೆ ಮಾಡುತ್ತೀರಿ ಎಂದು ಸುಮ್ಮನಾಗಿಸಿದ. ನನಗೆ ಬೊಂಬಾಯಿಯಲ್ಲಿ

500 ಕೋಟಿ ಇದೆ, ಸಿಂಗಪೂರ್‌ನಲ್ಲಿ ಎರಡು ಸಾವಿರ ಕೋಟಿ ಇದೆ, ಹಾಗೆ ಹೀಗೆ ಎಂದು ಲೆಕ್ಕ ಹೇಳಿದ ಮೇಲೆ ದುಡ್ಡು ಕೊಟ್ಟಿರುವವರು ಸುಮ್ಮನಾದರು. ಈ ಮಧ್ಯೆ ಅವನೇನು ಮಾಡಿದ ಎಂದರೆ ಎಂಟು-ಹತ್ತು ಹುಡುಗರಿಗೆ ದುಡ್ಡು ಕೊಟ್ಟು ಅವರಿಗೆ ಬಟ್ಟೆ ಹೊಲಿಸಿಕೊಟ್ಟುಬಿಟ್ಟ. ಅವರಿಗೆ ಬಟ್ಟೆ ಹೊಲಿಸಿಕೊಟ್ಟು ಅವರುಗಳಿಂದ ಇನ್‌ಕಂ ಟ್ಯಾಕ್ಸ್ ರೇಡ್ ಆದಂತೆ ಒಂದು ನಾಟಕವನ್ನಾಡಿಸಿಬಿಟ್ಟ. ಇನ್‌ಕಂ ಟ್ಯಾಕ್ಸ್‌ನವರು ರೇಡ್ ಮಾಡಿಬಿಟ್ಟರು, ನಾನು ಉಪಾಯದಲ್ಲಿ ನಿಮ್ಮವ್ವರ ಅಕೌಂಟ್ಸ್‌ಗಳನ್ನು ಕೊಡದೆ ಅದನ್ನು ಸೇವ್ ಮಾಡಿದ್ದೇನೆ, ನೀವು ಎಷ್ಟು ಕೃತಜ್ಞತೆ ನನಗೆ ಹೇಳಿದರೂ ತೀರದು, ನೀವು ದುಡ್ಡು ಕೊಟ್ಟಿದ್ದೀರಿ, ನಿಮಗೆ ಒಳ್ಳೆಯದು ಮಾಡಿದ್ದೇನೆ ಎಂದು ಈ ರೀತಿ ಹೇಳಿದ. ಆಮೇಲೆ ಯಾರೋ ಬಂದು ರೇಡು ಬಗ್ಗೆ ಕೇಳಿದಾಗ ನನಗೇನಿಲ್ಲ, ಇನ್‌ಕಂ ಟ್ಯಾಕ್ಸ್‌ನವರು ಯಾವ ಗಳಿಗೆಯಲ್ಲಿ ಬರುತ್ತಾರೋ, ರೇಡು ಬೇಕಾದರೆ ಕೊಡುತ್ತೇನೆ, ಅದು ನಿಮ್ಮ ಅದೃಷ್ಟ ಎಂದು ಹೇಳಿದ. ಬಿಡಿ ಸ್ವಾಮಿ, ಹೋಗಲಿ ಎಂದು ಅವರೂ ಹೇಳಿದರು. ಈ ರೀತಿಯಾಗಿ ಒಬ್ಬರೂ ರೇಡು ವಿಷಯವನ್ನು ಕೇಳಲಿಲ್ಲ. ಕೆಲವರು ಡಿಪಾಸಿಟ್ 70-80 ಕೋಟಿ ರೂಪಾಯಿಗಳೆನ್ನುತ್ತಾರೆ, ಕೆಲವರು ನೂರು ಕೋಟಿ ಎನ್ನುತ್ತಾರೆ, ಅಂತೂ 45-50 ಕೋಟಿ ರೂಪಾಯಿಗಳು ಈ ರೀತಿಯಾಯಿತು. ಅವನಿಗೆ ಹಣವನ್ನು ಯಾರ್ಯಾರು ಕೊಟ್ಟಿದ್ದಾರೆ ಎಂದರೆ ರಿಟೈರ್ಡ್ ಆಗಿರುವವರು ಕೆಲವರು ವಿಚಿತ್ರಮನಸ್ಕರು ಅಲ್ಲಿಗೆ ಹೋಗಿ ಬರುವವರು ಇದ್ದರಲ್ಲ, ಅವರು ಸುಳ್ಳು ಹೇಳುವುದಕ್ಕೆ ಶುರುಮಾಡಿದರು. ಇವರೇನು ಮಾಡಿದರು ಎಂದರೆ ಯಾರೋ ತಿಮ್ಮಪ್ಪನ ಹತ್ತಿರ ಹೋಗಿ ಯಾವಾಗ ನಿಮ್ಮ ಮಗಳ ಮದುವೆ ಎಂದು ಕೇಳಿದಾಗ ಅವರು ಏನೊ ನಾಲ್ಕು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡಿದ್ದೇನೆ, ಮುಂದಿನ ವರ್ಷ ನೋಡೋಣ ಎಂದು ಇದ್ದೇನೆ ಎಂದು ಹೇಳಿದಾಗ ಹಾಗಾದರೆ ನೀವು ಒಂದು ಕೆಲಸ ಮಾಡಿ, ನೀವು ನಾಲ್ಕು ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಇಡಿ. ಮುಂದಿನ ವರ್ಷ ಯಾಕೇ ನೀವು ಮದುವೆ ಮಾಡುವುದು. ಆ ಬಡ್ಡಿ ಹಣದಲ್ಲಿ ನಿಮ್ಮ ಮಗಳ ಮದುವೆ ನಡೆಯುತ್ತದೆ. ನಾಲ್ಕು ಲಕ್ಷ ರೂಪಾಯಿ ಬಡ್ಡಿ ಕೊಡುತ್ತಾನೆ. ಇನ್ನು ನಾಲ್ಕು ಲಕ್ಷ ರೂಪಾಯಿಗಳು ನಿಮಗೆ ಹಾಗೆ ಕ್ಯಾಷ್ ಉಳಿಯುತ್ತದಲ್ಲಾ. ಈ ರೀತಿ ಹೇಳಿದಾಗ ತಿಮ್ಮಪ್ಪನವರು ತೆಗೆದುಕೊಂಡು ಹೋಗಿ ಅಲ್ಲಿ ಡಿಪಾಸಿಟ್ ಎಂದು ಇಟ್ಟರು. ಮನೆಗಳಲ್ಲಿ ಕೆಲವರು ಹೆಂಗಳೆಯರು ಹೀಗೆ ಹೇಳಿದರಂತೆ. ಯಾರೋ, ಏನೋ, ಎಂತೋ ಹೇಗೋ ಕಷ್ಟಪಟ್ಟು ಮದುವೆಗೆಂದು ಇಟ್ಟಿದ್ದೇವೆ ಎಂದು ಎಚ್ಚರಿಕೆ ಹೇಳಿದಾಗ ಅದಕ್ಕೆ ತಿಮ್ಮಪ್ಪನವರು ಮೊದಲೇ ನೀನು ಹೆಂಗಸು, ನಿನಗೇನು ಗೊತ್ತು, ನೋಡು, ಎಂಥಾ ಛಾನ್ಸನ್ನು ದೇವರು ನನಗೆ ಒದಗಿಸಿಕೊಟ್ಟ, ಎಂದು ಹೇಳಿ ಅವರು ತೆಗೆದುಕೊಂಡು ಹೋಗಿ ಡಿಪಾಸಿಟ್ ಮಾಡಿದರು. ಇನ್ನು ರಿಟೈರ್ಡ್ ಆಗಿರುವುದು, ಅವರ ಹತ್ತಿರ ಈ ವಿಚಿತ್ರರುಗಳು ಹೋಗಿ ಏನು ಸ್ವಾಮಿ, ಎಷ್ಟು ಬಂತು, ಎಂದು ಕೇಳಿದಾಗ ಅದಕ್ಕವರು ಮೂರು ಲಕ್ಷ ರೂಪಾಯಿಗಳು ಎಂದು ಹೇಳಿದರೆ ಅಯ್ಯೋ ಕೇಡು ಸರ್ಕಾರ, ಪಾಪ, ಎಷ್ಟು ಸೇವೆ

ನೀವು ಮಾಡಿದ್ದೀರಿ, 15-20 ಲಕ್ಷ ರೂಪಾಯಿಗಳನ್ನಾದರೂ ನಿಮಗೆ ಕೊಡಬೇಡವೇ, ತುಂಬಾ ಕಡಿಮೆ ಕೊಟ್ಟಿದ್ದಾರೆ. ಅದಕ್ಕೆ ನಾನು ದಾರಿ ತೋರಿಸುತ್ತೇನೆ ಬನ್ನಿ ಎಂದು ಹೇಳಿ ಕರೆದರು. ಅವರು ಹೇಗೆ ಎಂದಾಗ ಇವತ್ತು ಮೂರು ಲಕ್ಷ ರೂಪಾಯಿಗಳನ್ನು ಡಿಪಾಸಿಟ್ ಮಾಡಿದರೆ ಮುಂದಿನ ವರ್ಷಕ್ಕೆ ಅದು ಆರು ಲಕ್ಷವಾಗುತ್ತೆ. ಅದರ ಆಚೆ ವರ್ಷಕ್ಕೆ 12 ಲಕ್ಷ ಆಗುತ್ತೆ. ಈ ರೀತಿ ಹೇಳಿದ್ದೂ ಹೇಳಿದ್ದೇ. ಹೀಗಾಗಿ ಅರ್ಧ ಕೋಟಿವರೆಗೂ ಲೆಕ್ಕ ಹೋಗುವುದೇ?

ಶ್ರೀ ಕೆ.ಹೆಚ್. ರಂಗನಾಥ್ :— ಬೆಂಗಳೂರಿನಲ್ಲಿ ಗೋಪಾಲ್‌ರಾವ್ ಬ್ಯಾಂಕ್ ಎಂದು ಶುರುವಾಯಿತು. ನಿಮಗೆ ಇದು ಗೊತ್ತೇ?

ಶ್ರೀ ಕೆ.ಹೆಚ್. ಹನುಮೇಗೌಡ :— ಆಗ ನಾನು ಮಿಡ್ಲ್ ಸ್ಕೂಲ್‌ನಲ್ಲಿ ಓದುತ್ತಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್ :— ಮಿಡ್ಲ್ ಸ್ಕೂಲ್‌ನಲ್ಲಿ ಓದುತ್ತಿದ್ದರಾ?

ಶ್ರೀ ಕೆ.ಹೆಚ್. ಹನುಮೇಗೌಡ :— ಮಿಡ್ಲ್ ಸ್ಕೂಲೂ, ಹೈಸ್ಕೂಲೂ ಮರೆತು ಬಿಟ್ಟಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್ :— ಅದನ್ನೇ ಮರೆತಿರಾ? ಹೇಗೆ?

ಶ್ರೀ ಕೆ.ಹೆಚ್. ಹನುಮೇಗೌಡ :— ತಾಪತ್ರಯದಲ್ಲಿ ಎಂಥದ್ದೋ ಮರೆತುಹೋಗುತ್ತದೆ. ಹಾಗಾಗಿ ಇದೂ ಮರೆತುಹೋಗಿದೆ. ಇದೇನೂ ಒಳ್ಳೆಯ ವಿಚಾರವಲ್ಲವಲ್ಲ. ಇದನ್ನು ಏಕೆ ಜ್ಞಾಪಕದಲ್ಲಿಟ್ಟುಕೊಳ್ಳಲಿ.

ಅಧ್ಯಕ್ಷರು :— ಗೋಪಾಲ್‌ರಾವ್ ಬ್ಯಾಂಕ್ ಎಂದು ಕೆಂಪೇಗೌಡ ರೋಡ್‌ನಲ್ಲಿತ್ತು.

ಶ್ರೀ ಕೆ.ಹೆಚ್. ರಂಗನಾಥ್ :— ಅಲ್ಲಿ ದೊಡ್ಡ ದೊಡ್ಡ ವಿಜ್ಞಾನಿಗಳು ಕೂಡ ದುಡ್ಡನ್ನು ಹಾಕಿದ್ದರು.

ಶ್ರೀ ಕೆ.ಹೆಚ್. ಹನುಮೇಗೌಡ :— ಹೀಗೆ ಮದುವೆಗೆಂದು ಇಟ್ಟುಕೊಂಡಿದ್ದವರು, ರಿಟೈರ್ಡ್ ಆದವರು, ಆಮೇಲೆ ಇನ್ನು ಕೆಲವರು ತುಂಬಾ ಶ್ರೀಮಂತರು ಇದ್ದರಲ್ಲ, ಈ ವಿಜೆಂಟರುಗಳಿಗೆ ಅದು ಗೊತ್ತಾಯಿತು. ಅವರಿಗೂ ಹೋಗಿ ಇರುವ ದುಡ್ಡೆಲ್ಲವನ್ನೂ ಡಿಪಾಸಿಟ್ ಮಾಡಿದರೆ ಮುಂದಿನ ವರ್ಷಕ್ಕೆ ಡಬಲ್ ಬಂದುಬಿಡುತ್ತೆ ಎಂದು ಹೇಳಿದರು. ಎಲ್ಲಾ ಗುಟ್ಟು. ಇವನೇನು ಎಲ್ಲರಿಗೂ ಹೇಳುತ್ತಾನೆ ಎಂದರೆ ಯಾರಿಗಾದರೂ ಹೇಳಿದರೆ ಕಷ್ಟವಾಗುತ್ತದೆ. ಹೇಳಬೇಡಿ ಎಂದು ಹೇಳುವುದು. ವಯಸ್ಸಾದವರು ಅವರ ಮನೆಗೆ ಹೋದರೆ ಅವರಿಗೆ ಎದ್ದು ಬರುವುದಕ್ಕೇ ಮನಸ್ಸಾಗುತ್ತಿರಲಿಲ್ಲ. ಅಯ್ಯೋ, ನೋಡಬೇಕು, ಇಂದ್ರವೈಭವ, ಅಲ್ಲಿ ದುಡ್ಡುಕೊಡುವುದು ದೊಡ್ಡದಲ್ಲ, ಅಲ್ಲಿ ಒಂದು ಗಂಟೆ ಇರಬೇಕು, ಹೀಗೆ ಶುರುವಾದಾಗ ಇದ್ದವರೆಲ್ಲಾ ತಗೆದುಕೊಂಡು ಹೋಗಿ ಅಲ್ಲಿ ಡಿಪಾಸಿಟ್ ಮಾಡಿದ್ದೂ

ಮಾಡಿದ್ದೇ. ಅವನು ಅಲ್ಲಿಂದ ಖಾಲಿ ಮಾಡುವ ಮೊದಲು ಒಬ್ಬರು ಬಾರಿ ವಯಸ್ಸಾಗಿದ್ದವರು, ಅವರನ್ನು ನೋಡಿದರೆ ನಮಗೆ ಹೊಟ್ಟೆ ಉರಿಯುತ್ತದೆ. 43 ಲಕ್ಷ ರೂಪಾಯಿಗಳನ್ನು ಕೊಟ್ಟರಂತೆ ಅವನು ಅಲ್ಲಿಂದ ಖಾಲಿ ಮಾಡುವ ಮೊದಲು. ಆಮೇಲೆ ಇನ್ನು ಕೆಲವರು ಏಜೆಂಟರು ಏನು ಮಾಡಿದರು ಎಂದರೆ ಜಮೀನು ಇರುವವರ ಬಳಿ ಹೋಗಿ ಎಷ್ಟು ಜಮೀನು ಇದೆ, ಎಷ್ಟು ಬೆಲೆ ಬಾಳುತ್ತೆ, ಆ ಏಜೆಂಟರುಗಳಿಗೆ ಇನ್ನು ಎಷ್ಟು ಇವನು ಕೊಟ್ಟನೋ ಗೊತ್ತಿಲ್ಲ, ನಮ್ಮ ಆಸ್ತಿ ಐದು ಲಕ್ಷ ರೂಪಾಯಿಗಳಿಗೆ ಹೋಗುತ್ತೆ ಎಂದರೆ ಸಾಲ ತೆಗೆದುಕೊಂಡು ಡಿಪಾಸಿಟ್ ಮಾಡು. ಸುಮ್ಮನೆ ಫಲ ಬಿತ್ತಿ ಏಕೆ ಫಜೀತಿ ಮಾಡುತ್ತೀ, ಕೆಲವರು ಟೌನ್‌ನಲ್ಲಿರುವ ರೈತರು, ಇವರು ಹೊಟ್ಟೆಗಿಲ್ಲದವರಲ್ಲ. ಟೌನ್‌ನಲ್ಲಿರುವವರು ಎಷ್ಟೋ ಜನ ಸಾಲವನ್ನು ತೆಗೆದುಕೊಂಡರು. ಹತ್ತು ಲಕ್ಷ ರೂಪಾಯಿಗಳ ಆಸ್ತಿಯನ್ನು ಬರೆದುಕೊಟ್ಟು ಬ್ಯಾಂಕಿನಲ್ಲಿ 5 ಲಕ್ಷ ಸಾಲ ತೆಗೆದುಕೊಂಡರು. ಅವನ್ನು ತೆಗೆದುಕೊಂಡು ಹೋಗಿ ಡಿಪಾಸಿಟ್ ಮಾಡಿದರು. ಆಮೇಲೆ ಇನ್ನು ಕೆಲವರು ಹೋಟೆಲ್‌ನವರು, ಅವರದು ಬರವಾಗಿಲ್ಲ. ಏಕೆಂದರೆ ಅವರು ಸ್ವಂತ ಬೆವರಿಗಿಂತಲೂ ಬೇರೆಯವರು ಬೆವರು ಸುರಿಸಿದ ದುಡ್ಡು. ಅವರು ಕೂಡ ಹೋಗಿ ಯದ್ವಾತದ್ವಾ ಅವನ ಬಳಿ ಹಣವನ್ನು ಡಿಪಾಸಿಟ್ ಮಾಡಿದರು. ಹೀಗಾಗಿ ಎಲ್ಲರೂ ಹಾಕಿದಮೇಲೆ ಒಟ್ಟು ಲೆಕ್ಕ ಸಿಕ್ಕಿರುವುದು 45 ಕೋಟಿ ರೂಪಾಯಿಗಳು. ಎಲ್ಲರಿಗೂ ದುಡ್ಡು ಕೊಡುತ್ತೇನೆ, ನನ್ನದೇನೂ ತಾಪತ್ರಯವಿಲ್ಲ, ಎಂದು ಹೇಳಿ ಒಂದು ರಾತ್ರಿಯೊತ್ತು ಹೆಂಡತಿ ಮಕ್ಕಳನ್ನು ಕರೆದುಕೊಂಡು ಊರುಬಿಟ್ಟ. ಅವರವರ ಸಂಕಟ ಅವರಿಗೇ ಗೊತ್ತು. ನನ್ನ ಹತ್ತಿರ ಒಬ್ಬರಾದ ಮೇಲೆ ಒಬ್ಬರು ಬಂದು ಹನುಮೇಗೌಡರು ಹೀಗೆ ಹೋಯಿತು ಎಂದು ಹೇಳುವುದು. ಜೊತೆಗೆ ಅವರು ಯಾರಿಗೂ ಹೇಳಬೇಡಿ ಎಂದು ಹೇಳುವುದು. ಏಕೆಂದರೆ ಅವರ ಮರ್ಯಾದೆ ಹೋಗುತ್ತದೆ ಎಂದು ಹೇಳುತ್ತಾರೆ. ಕೆಲವರು ವ್ಯಾಪಾರ ಮಾಡುವವರು 10 ಪೈಸೆ ಬಡ್ಡಿ ಎಂದರೂ ಬಿಡುತ್ತಿರಲಿಲ್ಲ, ಹೋಗಲಿ ಬಿಡಿ ಶೆಟ್ಟರೇ ಎಂದು ಹೇಳುತ್ತಾರೆ ಎಂದು ಯಾರಿಗೂ ಹೇಳಬೇಡಿ ಎಂದು ಹೇಳುತ್ತಿದ್ದರು. ಇನ್ನು ರಿಟೈರ್ಡ್ ಆಗಿರುವವರು ಮನೆಯಲ್ಲಿರುವ ಹೆಂಗಳೆಯರಿಗೆ ಹೆದರಿ ಹೇಳಿದರೆ ಊಟಕ್ಕೆ ಹಾಕುವುದಿಲ್ಲ ಎಂದು ಹೇಳಿ ಯಾರಿಗೂ ಹೇಳಬೇಡಿ ಎಂದು ಹೇಳುತ್ತಿದ್ದರು. ಅವರ ಸಂಕಟ ಹಾಗೆ. ಇನ್ನು ಮದುವೆ ಮಾಡುತ್ತೇವೆ ಎಂದು ಇಟ್ಟುಕೊಂಡಿದ್ದರಲ್ಲ, ಅವರ ಸಂಕಟ ಬೇರೆ ರೀತಿ. ಇದೆಲ್ಲಾ ತೀವ್ರಗತಿಯಾದಮೇಲೆ ಹೇಳುತ್ತೇನೆ ಎಂದ ಮೇಲೆ ನನ್ನ ಹತ್ತಿರ ಒಂದು ಬ್ಯಾಚ್ ಬಂತು, ಹನುಮೇಗೌಡರೇ, ಏನೋ ಕೊಡುವ ಹಾಗೆ ಹೇಳುತ್ತಾನೆ, ನೀವೇನಾದರೂ ಅಸೆಂಬ್ಲಿಯಲ್ಲಿ ಇದನ್ನು ಥೈಸ್ ಮಾಡಿದಿಟ್ಟರೆ ಕಷ್ಟವಾಗುತ್ತದೆಂದು ಹೇಳಿ ಮೂರು ಸಾರಿ ತಡೆದರು.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಹನುಮೇಗೌಡರೇ, ಜನ ಸೇವಕರು ಯಾರು ಕೇವಲ ಇಟ್ಟರಲಿಲ್ಲವೇ?

ಶ್ರೀ ಕೆ.ಹೆಚ್. ಹನುಮೇಗೌಡ :— ಜನ ಸೇವಕರು ಅಲ್ಲಿ ಇಟ್ಟಿಲ್ಲ, ಮರಗಳಲ್ಲಿ ಇಟ್ಟಿದ್ದಾರೆ, ಸ್ವಿಸ್ ಬ್ಯಾಂಕ್‌ನಲ್ಲೂ ಒಬ್ಬಿಬ್ಬರು ಇಟ್ಟಿದ್ದಾರಂತೆ. ಏನೋ ಐದಾರು ಸಾವಿರ ಕೋಟಿ ಇಟ್ಟವರಂತೆ. ಅವರ ವಿಚಾರ ನನಗೆ ಗೊತ್ತಿಲ್ಲ, ಕೆಲವರಂತೂ ಮಠದಲ್ಲಿ ಇಟ್ಟಿರುವುದು ನಿಜ. ಮೊದಮೊದಲು 5 ಕೋಟಿ 10 ಕೋಟಿ ಬಂದದ್ದನ್ನು ಮಠದಲ್ಲಿ ಇಟ್ಟರು. ನೂರಾರು ಕೋಟಿ, ಸಾವಿರಾರು ಕೋಟಿ ಬಂದಮೇಲೆ ಸ್ವಿಸ್ ಬ್ಯಾಂಕ್‌ನಲ್ಲಿ ನಮ್ಮ ಮಾಜಿ ಸಚಿವರು ಹೇಳಿದಂತೆ ಅಲ್ಲೆಲ್ಲೂ ಇಟ್ಟವರಂತೆ. ಅವರು ಬರುತ್ತೆ ಎಂದು ತಿಳಿದುಕೊಂಡಿದ್ದಾರೆ. ಬಿಡಿ ಅದು ಹೋಗಲಿ ಅದು ಪಾಪದ ದುಡ್ಡು. ಹೋದರೆಷ್ಟು? ಬಂದರೆಷ್ಟು? ನಿಜವಾಗಿ ಬೆವರು ಸುರಿಸಿ ದುಡಿದ ರೈತರ ಹಣದ ಬಗ್ಗೆ ನಾವು ಕಣ್ಣೀರು ಹಾಕಬೇಕೇ ವಿನಃ ದೇಶ ದರೋಡೆ ಮಾಡಿದ ದುಡ್ಡು ಬಂದರೆಷ್ಟು? ಹೋದರೆಷ್ಟು? ಈ ಜನ್ಮದಲ್ಲಂತೂ ಆ ಸ್ವಿಸ್ ಬ್ಯಾಂಕ್ ಹಣ ಅವರಿಗೆ ಸಿಗುವುದಿಲ್ಲ. ಎಲ್ಲರ ದುಡ್ಡು ಹೊತ್ತುಕೊಂಡು ಹೋದವನು ಇವನು ಸಿಂಗಪುರ್‌ನಲ್ಲಿ ಹೋಟೆಲ್ ಇಟ್ಟುಕೊಂಡಿದ್ದಾನಂತೆ. ಅವನ ಹೆಂಡತಿ ಮಕ್ಕಳು ಇಲ್ಲೆಲ್ಲೊ ಇದ್ದಾರೆ ಎಂದು ಹೇಳುತ್ತಾರೆ. ಈಗ ಎಂಟು ದಿವಸಗಳ ಹಿಂದೆ ಯಾವುದೋ ಹೋಟೆಲ್‌ನಲ್ಲಿದ್ದನಂತೆ. ನನಗೆ ಗೊತ್ತಿಲ್ಲ. ಅದು ಹೈಯಸ್ಟ್ ಪೇಯಿಡ್ ಹೋಟೆಲ್ ಅಂತೆ. ಅಲ್ಲಿ ರಾತ್ರಿ ಇದ್ದು ಬೆಳಿಗಿನ ಜಾವ 5 ಗಂಟೆಗೆ ಜಾಗ ಖಾಲಿ ಮಾಡಿಬಿಟ್ಟನಂತೆ. ಬಾದಿಗೆ 4 ಸಾವಿರವೋ ಐದು ಸಾವಿರವೋ, ಅದು ನನಗೆ ಗೊತ್ತಿಲ್ಲ ಸ್ವಾಮಿ. ಅವನನ್ನು ಹಿಡಿಯಲೇಬೇಕು. ಅವನನ್ನು ಹಿಡಿದು ದುಡ್ಡು ಕಳೆದುಕೊಂಡಿರುವ ಪಾಪದ ಜನರು ಕಣ್ಣೀರುಹಾಕುತ್ತಿದ್ದಾರೆ. ಅವರುಗಳು ಸರ್ವನಾಶವಾಗಿ ಹೋಗಿದ್ದಾರೆ. ಇವತ್ತಿನವರು ನನ್ನ ಬಳಿ ಮಾತನಾಡುತ್ತಿದ್ದರು, ಅವರು ಎಲ್ಲೊ ಎದ್ದುಹೋಗಿದ್ದಾರೆ, ಅವರ ನೆಂಟರೊಬ್ಬರು 50 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರಂತೆ. ಅವರೇ ನನಗೆ ಹೇಳಿದರು. ಅವರದು ಸಾವಿರಾರು ಎಕರೆ ಆಸ್ತಿ ತೋಟವಿತ್ತು ಅವೆಲ್ಲನ್ನು ಮಾರಿದರು ಎಂದರೆ ಈ ಆಸ್ತಿ ಬೆಳೆದಿದ್ದರಲ್ಲ, ಎಲ್ಲರ ಹತ್ತಿರ ಹೋಗಿ ಎರಡು ಪರ್‌ಸೆಂಟ್ ಬಡ್ಡಿ ಮೇಲೆ ಎಲ್ಲರ ಹತ್ತಿರವೂ ಹಣವನ್ನು ತೆಗೆದುಕೊಂಡು ಬಂದು ಇವನಿಗೆ ಕೊಟ್ಟುಬಿಟ್ಟರು. ಶಿವಣ್ಣನವರು 25-30ಕೋಟಿ ಎಂದು ಹೇಳುತ್ತಾರೆ. ಇವರು ಎಲ್ಲಾ ಪ್ಯಾಟರುಗಳ ಹತ್ತಿರ ತೆಗೆದುಕೊಂಡು ಬಂದು ಕೊಟ್ಟರು. ಇವರು ಸ್ವಾಮಿವಂತರು ನೋಡಿ. ಇವರಿಗೆ 700-800 ಎಕರೆ ಆಸ್ತಿ ತೋಟವಿತ್ತು. ಹೀಗಾಗಿ ಇವರಿಗೆ ಎಲ್ಲರೂ ಕೊಟ್ಟುಬಿಟ್ಟರು. ಅದು 40-50 ಕೋಟಿ ರೂಪಾಯಿಗಳಾಗಿದೆಯಂತೆ. ಇವರಿಗೆ ದುಡ್ಡು ಕೊಟ್ಟವರೆಲ್ಲರೂ ಬಂದು ಇವರ ಬಳಿ ಕುಳಿತುಕೊಂಡಾಗ ಇದು ಮಧ್ಯದ ಪ್ರಶ್ನೆ ಎಂದು ಗಂಡ-ಹೆಂಡತಿಗೆ ಎಂದು ಹೇಳಿ 30 ಎಕರೆ ಜಾಸ್ತಿ ಉಳಿದದ್ದೆಲ್ಲವನ್ನೂ ಮಾರಿಸಿ ದುಡ್ಡು ವಾಪಸ್ ಮಾಡಿಸಿದೆ. ಜಾಗಾದರೂ 20 ಕಾಲ್‌ಶೆಷ್ಟು ಕೂಡ ಕೊಡುವುದಕ್ಕಾಗಲಿಲ್ಲ, ಹೀಗಾಗಿ ಹಣಾಗಿ ಹೋದ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ನಿಮ್ಮ ಛೇಂಬರ್‌ನಲ್ಲಿ ಇದು ನಡೆದದ್ದು. ನಿಮಗೆ ಜ್ಞಾಪಕ ಇದೆಯೇ? ಮತ್ತೆ ಹಾವು ಸುಮ್ಮನೆ ಕುಳಿತಿದ್ದೀರಿ? ಇವರ ಮುಂದೆ ನಡೆದ ಮಾತು ಅದು. ಶಿವಣ್ಣನವರು ಇವರಿಗೆ (ಮಾನ್ಯ ಅಧ್ಯಕ್ಷರಿಗೆ) ಕಿವಿ ಹೇಳಿಕೊಳ್ಳುತ್ತಿದ್ದರು.

ಅಧ್ಯಕ್ಷರು :— ಮಾನ್ಯ ಶಿವಪ್ಪನವರು ಇದನ್ನು ತೂಗ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆಂದು ನನಗೆ ಆ ವಿಷಯವನ್ನು ಹೇಳಿದ್ದರು. ಅದರ ಬಗ್ಗೆ ಹನುಮೇಗೌಡರು ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದರಿಂದಾಗಿ ಸಾವಿರಾರು ಜನರು ನಿರ್ಗತಿಕರಾಗಿದ್ದಾರೆ. ತಮ್ಮ ಪ್ರಭಾವವನ್ನು ಉಪಯೋಗಿಸಿ. ನಾನು ಮಾನ್ಯ ಖಿರ್ಗಯವರಿಗೂ ಇದರ ಬಗ್ಗೆ ಹೇಳಿದ್ದೇನೆ. ನೋಡುತ್ತೇನೆ ಬಿಡಿ, ಎಷ್ಟು ಸಾರಿ ಹೇಳುತ್ತೀರಿ ಎಂದರು. ಎಲ್ಲರೂ ಹಾಳಾಗಿ ಹೋಗಿಬಿಟ್ಟರು ಎಂದು ಹೇಳಿದ್ದೇನೆ. ಅವನನ್ನು ಹಿಡಿಸುತ್ತೇನೆ ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ತಾವು ಒಂದು ಭರವಸೆಯನ್ನು ನಮ್ಮ ಜನಗಳಿಗೆ ಕೊಡುತ್ತೀರಾ? ಏನಾದರೂ ಮಾಡಿ ಆತನನ್ನು ಹಿಡಿದು ಬಂಧಿಸಿದರೆ ದುಡ್ಡು ಬರುತ್ತದೆ. ಆತ ಸಿಂಗಾಪೂರಿಗೆ ಹೋಗಿ ಅಲ್ಲಿ ಕ್ಯಾಂಪ್ ಹಾಕಿದ್ದಾನೆ. ದೆಹಲಿಯಲ್ಲಿ ಇಲ್ಲವೇ ಹತ್ತಿರದಲ್ಲಿ ಇಲ್ಲಿಯೊಬ್ಬ ಕ್ಯಾಂಪ್ ಹಾಕಿದರೆ ಹಿಂದಿಯವರೆಂದುಕೊಂಡು, ಸಿಂಗಾಪುರಿಗೆ ಹೋಗಲು ವೀಸಾ ಸಿಗುವುದರಿಂದ ಬಚಾವ್ ಆಗಬಹುದೆಂದು ಭಾವಿಸಿ ಆತ ಅಲ್ಲಿಗೆ ಹೋಗಿ ಕ್ಯಾಂಪ್ ಹಾಕಿದ್ದಾನೆ. ಆದುದರಿಂದ, ಆತನನ್ನು ಹಿಡಿದು ಬಂಧಿಸಿ ದುಡ್ಡು ಕೊಡಿಸಿದರೆ ನಾನು ನಿಮಗೆ ಜನರಿಂದ ಒಂದು ಕೋಟಿ ಧನ್ಯವಾದಗಳನ್ನು ಹೇಳಿಸುತ್ತೇನೆ.

ಅಧ್ಯಕ್ಷರು :— ತಮ್ಮ ಸಲಹೆಯನ್ನು ಸ್ವೀಕರಿಸಿ, ನಾನು ಸರ್ಕಾರದ ಮೇಲೆ ಒತ್ತಡ ತಂದು ಆತನನ್ನು ಬೇಗ ಆತನನ್ನು ಹಿಡಿದು ಬಂಧಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಧನ್ಯವಾದಗಳು. ನೀವು ಅಷ್ಟು ಮಾಡಿಸಿ ಪುಣ್ಯಕಟ್ಟಿಕೊಳ್ಳಿ. ನೀವು ಇನ್ನು 25 ವರ್ಷಗಳ ಕಾಲ ಅಲ್ಲಿಯೇ (ಅಧ್ಯಕ್ಷ ಪೀಠದಲ್ಲಿ) ಕುಳಿತುಕೊಳ್ಳಬೇಕು.

(ಸದನದಲ್ಲಿ ನಗು)

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಇದು ಸರಿಯಲ್ಲ. ನಾವು, ತಾವು ಆ ಸ್ಥಾನ (ಸಚಿವ ಸ್ಥಾನ)ದಲ್ಲಿ ಕುಳಿತುಕೊಳ್ಳಬೇಕೆಂದು ಬಯಸಿದ್ದರೆ, ಇವರು ತಮ್ಮನ್ನು ಇಲ್ಲಿಯೇ ಕೂರಿಸುತ್ತಿದ್ದಾರೆ. ನೋಡಿ ಹೇಗಿದೆ?

(ಸದನದಲ್ಲಿ ನಗು)

ಶ್ರೀ ಕೆ.ಹೆಚ್. ಹನುಮೇಗೌಡ :— ಇದು ನಗತಕ್ಕಂಥ ವಿಚಾರವಲ್ಲ. ಅವರನ್ನು ನೋಡಿದರೆ ನನ್ನ ಕಣ್ಣಲ್ಲಿ ನೀರು ಬರುತ್ತದೆ. ಇವತ್ತು ನಿರ್ಗತಿಕರಾದವರು, ಬಡವರಾದವರು,

ನಿವೃತ್ತರಾದವರು ಇಂತಹ ಎಷ್ಟೋ ಸಾವಿರಾರು ಜನರು ಸರ್ವನಾಶವಾಗುತ್ತಿದ್ದಾರೆ. ಇನ್ನು 2-3 ತಿಂಗಳಾಗಿರುವಾದ ಬಳಿಕ ನಿಜವೇನೆಂದು ಗೊತ್ತಾದರೆ ವಿಷ ತೆಗೆದುಕೊಂಡು ಸಾಯುವ ಬಹಳಷ್ಟು ಜನರಿದ್ದಾರೆ, ನೋಡಿ ಹಾಕಿಕೊಳ್ಳುವವರಿದ್ದಾರೆ. ಅವರುಗಳ ಇಡೀ ಸಂಸಾರವೇ ಹಾಳಾಗಿ ಹೋಗಿದೆ. ಆದುದರಿಂದ, ಸರ್ಕಾರದಲ್ಲಿ ನಾನು ಕೈಮುಗಿದು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಇದರ ಬಗ್ಗೆ ತಾವು ಗಂಭೀರ ಕ್ರಮ ಕೈಗೊಂಡು ಆತನನ್ನು ಹಿಡಿದು ಬಂಧಿಸಿ ಆತನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರುಗಳಿಗೆ ಬಿಡಿಗೊಡುವುದು ಬೇಡ, ತೆಗೆದುಕೊಂಡಿರುವ ಅಸಲಿನಲ್ಲಾದರೂ ಅರ್ಧ ಕೊಡುವ ವಿಚಾರ ಮಾಡಬೇಕೆಂದು ಒತ್ತಾಯ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಕೆ. ಎನ್. ಶುಬ್ಬಾರೆಡ್ಡಿ (ಬುಸವನ ಗುಪ್ಪ) :— ಮಾನ್ಯ ಅಧ್ಯಕ್ಷರೆ, ಸರ್ಕಾರದವರು ತಂದಿರುವ ಈ ವಿಧೇಯಕವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. This Bill is entitled `` the Karnataka Protection of Interest of Depositors in Financial Establishments Bill." This should have been titled as "The Karnataka Protection of Depositors in Financial Establishments Bill". There is no necessity for the word "interest". The Bill itself is meant for protecting the Depositors. Further, Chapter IV. Section 10 gives details of Special Court, Under sub-section (4) of Section 10. it is stated, "any case pending in any other court on the date of notification constituting a special court under sub-section(1) to which the provision of this Act apply shall stand transferred to the Special Court" That means all the pending cases in other courts shall stand transferred to the Special Court. That is good. The most important thing is that time limit must be fixed for disposal of cases. A maximum period of two years or three years may be fixed, otherwise, when they are going to decide the matter? It is very important. That amendment should be included in this.

Then Section 17 mentions about Special Public Prosecutor. There are already public prosecutors in all the district courts and unfortunately again it has to come before the Government and they have to appoint Public Prosecutors. Prosecutors are already there in all the District Courts all over the State. Therefore, there is no need

for appointment of Special Public Prosecutors. Because that will take its own time.

Then about Section 21. which states about Power to make Rules in Chapter V. Rules must be made as early as possible, because in respect of several bills which have been passed by the Legislature. Rules have not been framed. It takes its own time. There is lot of delay in framing the Rules. Rules are very important, because without Rules, there is no guidance and how can they go by this Act alone? They should have made the Rules along with this Bill or even now they can frame the Rules as early as possible and place it before the House. That is our request.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರವು 2000ನೇ ಸಾಲಿನ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು ತಂದಿರುವುದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಬಹಳ ದಿನಗಳಿಂದಲೂ ದೇಶದ, ರಾಜ್ಯದ ತಲವಾರು ಪತ್ರಿಕೆಗಳಲ್ಲಿ ಹಣಕಾಸು ವಿಚಾರದಲ್ಲಿ ಹಣಕಾಸಿನ ಸಂಸ್ಥೆಗಳು ಸಾಕಷ್ಟು ಜನರಿಗೆ ಮೋಸ, ಅನ್ಯಾಯವೆಸಗುತ್ತಿರುವುದನ್ನು ದಿನನಿತ್ಯವೂ ನಾವು ನೋಡುತ್ತಿದ್ದೇವೆ. ಹಣವೆಂದರೆ ಹೆಣ ಕೂಡ ಬಾಯ್ದೆರೆಯುತ್ತದೆ. ಎಂದೂ ಹಗೂ ದುಡ್ಡೇ ದೊಡ್ಡಪ್ಪ ಎಂಬಂತಹ ಮಾತುಗಳನ್ನೂ ಕೇಳುತ್ತಿರುವ ಹಿನ್ನೆಲೆಯಲ್ಲಿ ಹೂಡಿರುವ ಹಣಕ್ಕೆ ವರ್ಷದಲ್ಲಿ, ಎರಡು ವರ್ಷದಲ್ಲಿ ದ್ವಿಗುಣಗೊಳಿಸಿಕೊಡುತ್ತೇವೆಂಬ ಆಶ್ವಾಸನೆಯನ್ನು ಬೆನ್ನತ್ತಿ ಜನಸಾಮಾನ್ಯರು ತಮ್ಮ ಜೀವನದಲ್ಲಿ ಉಳಿತಾಯ ಮಾಡಿರುವ ಹಣವನ್ನೆಲ್ಲಾ ಇಂತಹ ಆಶ್ವಾಸನೆ ಕೊಡುವ ಹಣಕಾಸು ಸಂಸ್ಥೆಗಳಲ್ಲಿ ಠೇವಣಿಯಾಗಿ ಹೂಡಿ ನಂತರ ಮೋಸ ಹೋಗಿರುವ ಉದಾಹರಣೆಗಳ ಬಗ್ಗೆ ಈಗಾಗಲೇ ಸಾಕಷ್ಟು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸಣ್ಣ ಕೈಗಾರಿಕಾ ಸಚಿವರ ಕ್ಷೇತ್ರದ ಜ್ಯಾಪ್ತಿಗೆ ಬರುವ ಇಳಕಲ್‌ನಲ್ಲಿರುವ ಒಂದು ಪ್ರೌಢಶಾಲೆಯಲ್ಲಿ ಶಿಕ್ಷಕಿ ಆಗಿರುವ ಶ್ಯಾಮಸುಂದರ ಭಜಂತ್ರಿ ಎಂಬುವವರು ಸಾವಿರಾರು ಕೋಟಿ ರೂಪಾಯಿಗಳ ಪಬ್ಲಿಂಗ್ ಬೊರೆ ಎಂಬ ಹೆಸರು ಪಡೆದಿದ್ದು, ಈಗ್ಗೆ ಸುಮಾರು ಎರಡು ವರ್ಷಗಳ ಹಿಂದೆ ಇಳಕಲ್, ಹುಬ್ಬಳ್ಳಿ, ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಜನಸಾಮಾನ್ಯರಿಂದ ಇದೇ ರೀತಿ ಸಾವಿರಾರು ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ನಂತರ ಆತ ಪರಾರಿ ಹೋದ ಸುದ್ದಿ ಬಂತು. ಆದರ ಬಗ್ಗೆ ಇನ್ನೊತ್ತಿನವರೆವಿಗೂ ತನಿಖೆಯಾಗಲಿಲ್ಲ.

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕೆಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ತನಿಖೆ ಆಗಿಲ್ಲವೆಂದಲ್ಲ. ಸಿ.ಓ.ಡಿ. ಎನ್ಕ್ವೇರಿಗೆ ಹಿಂದಿನ ಸರ್ಕಾರ ಆದೇಶಿಸಿತ್ತು. ಆದರೆ, ಅಲ್ಲಿ ಯಾರೊಬ್ಬರೂ ಕೂಡ ಕಂಪ್ಲೇಂಟ್ ಅನ್ನು ಫೈಲ್ ಮಾಡದ ಕಾರಣ ತನಿಖೆಯಾಗಲಿಲ್ಲ. ಅಧಿಕಾರಿಗಳು ಅಲ್ಲಿಗೆ ಸಾಕಷ್ಟು ಸಲ ಹೋಗಿ ತನಿಖೆ ಮಾಡುವ ಪ್ರಯತ್ನ ಮಾಡಿದ್ದಾರೆ.

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ :— ಅದೇ ರೀತಿ ಇವೊತ್ತು ಸಾಕಷ್ಟು ಕಡೆಗಳಲ್ಲಿ ಹಣಕಾಸು ಇಟ್ಟುಕೊಂಡು ಲೇವಾದೇವಿ ವ್ಯವಹಾರ ನಡೆಸುತ್ತಿದ್ದಾರೆ. ನನ್ನ ಕ್ಷೇತ್ರವಾದ ಬಸವನ ಬಾಗೇವಾಡಿ ಕ್ರಾಂತಿಯೋಗಿ ಬಸವಣ್ಣನವರು ಜನ್ಮತಾಳಿರುವ ಸ್ಥಳವಾಗಿದ್ದು ಇಲ್ಲಿ ಸಾಮಾನ್ಯ ಜನರು ಸೇರಿಕೊಂಡು ಒಂದೆರಡು ಲಕ್ಷ ರೂಪಾಯಿಗಳಷ್ಟು ಹಣವನ್ನು ಸಂಗ್ರಹಿಸಿ ಲೇವಾದೇವಿ ಸಂಸ್ಥೆ ಪ್ರಾರಂಭಿಸಿ ತಮ್ಮ ಸಂಸ್ಥೆಯಲ್ಲಿ ಹಣ ಹೂಡಿದರೆ ಒಂದೇ ವರ್ಷದಲ್ಲಿ ಹೂಡಿರುವ ಹಣವನ್ನು ದ್ವಿಗುಣಗೊಳಿಸಿಕೊಡುತ್ತೇವೆಂದು ಹೇಳಿ ಹಣಕಾಸಿನ ವ್ಯವಹಾರ ನಡೆಸುತ್ತಿದ್ದಾರೆ. ಇವರಿಂದ ಸಾಲ ಪಡೆದುಕೊಂಡ ಸಾಕಷ್ಟು ಜನರು ಇವರ ಮೋಸದ ಜಾಲ ತಿಳಿಯಲಾರದೆ ಹಣ ಕಟ್ಟಲಾಗದೆ ನೇಣು ಹಾಕಿಕೊಂಡು ಸತ್ತಿದ್ದಾರೆ. ಆ ದೃಷ್ಟಿಯಿಂದ ಅದು ಬಸವನ ಬಾಗೇವಾಡಿಯಾಗದೆ ಬಡ್ಡಿ ಬಾಗೇವಾಡಿ ಎಂದು ಕರೆಯಬೇಕೆಂದು ಕೆಲವರು ಹೇಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ರಾಷ್ಟ್ರದಲ್ಲಿ ಇದೇ ರೀತಿ ಜನರಿಗೆ ಮೋಸ ಮಾಡಿ ಮರೆಯಾದವರ ಬಗ್ಗೆ ತನಿಖೆಯಾಗಿ ಜನರಿಗೆ ನ್ಯಾಯ ಸಿಗುತ್ತಿಲ್ಲ. ಇವೊತ್ತು ಅರಬ್ ರಾಷ್ಟ್ರಗಳಲ್ಲಿ ಮೋಸ ಮಾಡಿದವರಿಗೆ, ಮಾದಕ ವಸ್ತು ಮಾರಾಟ ಮಾಡುವವರಿಗೆ ಇನ್ನಿತರ ಅಪರಾಧ ಕೃತ್ಯವೆಸಗಿದವರಿಗೆ ಶಿರಚ್ಛೇದನ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಆದರೆ, ನಮ್ಮ ದೇಶದಲ್ಲಿ ಇದಕ್ಕೆ ತದ್ವಿರುದ್ಧ. ಕೊಲೆ ಮಾಡಿದ ಅಪರಾಧಿಗಳಿಗೆ ಯಾವುದೇ ಶಿಕ್ಷೆಯಾಗುವುದಿಲ್ಲ, ಮೋಸ ಮಾಡುವವರು ಪದೇ ಪದೇ ಮಾಡುತ್ತಿದ್ದಾರೆ. ನಮ್ಮ ದೇಶದಲ್ಲಿ ಏನೂ ಮಾಡಿದರೂ ಏನೂ ಆಗುವುದಿಲ್ಲ. ಒಟ್ಟಿನಲ್ಲಿ ಕೊಟ್ಟವನು ಕೋಡಂಗಿ ಇಟ್ಕೊಂಡವನು ತಿರಭದ್ರ ಎಂಬಂಥ ಪರಿಸ್ಥಿತಿ ಇದೆ. ಆ ಹಿನ್ನೆಲೆಯಲ್ಲಿ ಇವೊತ್ತು ಸರ್ಕಾರ ಹಣಕಾಸಿನ ವಿಷಯಕ್ಕೆ ಸಂಬಂಧಿಸಿದಂತೆ ಬಹಳ ಪ್ರಾಮುಖ್ಯವಾದ ಮಸೂದೆ ತಂದಿದೆ. ಬದುಕಲು ಪ್ರತಿಯೊಬ್ಬರಿಗೂ ಹಣ ಬೇಕು. ಆದುದರಿಂದ, ಮನುಷ್ಯ ದುಡಿದಿರುವ ಹಣವನ್ನು ಇಂತಹ ಬ್ಯಾಂಕುಗಳಲ್ಲಿ, ಚಿಟ್ ಫಂಡ್‌ನಲ್ಲಿ ತೊಡಗಿಸಿ ಆತ ಮೋಸ ಹೋಗದ ರೀತಿಯಲ್ಲಿ ಹಾಗೂ ಸಾಲ ಪಡೆಯುವ ಸಾಮಾನ್ಯ ಜನರಿಗೆ ಹೆಚ್ಚಿನ ದರದಲ್ಲಿ ಬಡ್ಡಿ ಬೀಳದ ರೀತಿಯಲ್ಲಿ ಈ ಕಾನೂನನ್ನು ತಾವು ತಂದು ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) ಮಾನ್ಯ ಅಧ್ಯಕ್ಷರೆ, ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಂಬಂಧ ತಂದಿರುವ ಈ ಮಸೂದೆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಇತರ ಎಲ್ಲ ಮಾನ್ಯ ಸದಸ್ಯರು ಮಾತನಾಡಿ ತಮ್ಮ ಕಾಳಜಿ ವ್ಯಕ್ತಪಡಿಸಿದ್ದಾರೆ. ಹಣವನ್ನು ಠೇವಣಿಯಾಗಿ ತೊಡಗಿಸುವವರು ಸಾಮಾನ್ಯವಾಗಿ ಮಧ್ಯಮ ವರ್ಗದವರು, ಬಡತನದಲ್ಲಿರುವವರು ಜೊತೆಗೆ ಮಹಿಳೆಯರೂ ಸಹ ಸೇರಿದ್ದಾರೆ. ಠೇವಣಿಯಾಗಿ ಹಣ ತೊಡಗಿಸಿದಾಗ ಅದು ರಿಜಿಸ್ಟರ್ಡ್ ಸಂಸ್ಥೆಯಾಗಿರಬಹುದು, ಅನ್-ರಿಜಿಸ್ಟರ್ಡ್ ಸಂಸ್ಥೆಯಾಗಿರಬಹುದು ಅಥವಾ ಕಂಪನಿಗಳಾಗಿರಬಹುದು. ಇವುಗಳು ಆಕರ್ಷಣೀಯ ರೀತಿಯಲ್ಲಿ ಬಡ್ಡಿ ಕೊಡುವುದಾಗಿ ಹೇಳಿ ಇತ್ತ ಠೇವಣಿಯನ್ನೂ ಕೊಡದೆ ಅತ್ತ ಬಡ್ಡಿಯನ್ನೂ ಕೊಡದೆ ರಾತ್ರೋರಾತ್ರಿ ಮಾಯವಾಗುವುದನ್ನು ನಾವು ನೋಡುತ್ತಿದ್ದೇವೆ. ಇಂತಹ ಒಂದು ವ್ಯವಸ್ಥೆಯಲ್ಲಿ ಠೇವಣಿ ಹೂಡಿದ ಅನೇಕರು ಮೋಸ ಹೋದಾಗ ಒಂದು ಪೊಲೀಸ್ ಕಂಪ್ಲೆಂಟ್ ಕೊಟ್ಟು ಬಳಿಕ ಸರಿಯಾದ ರೀತಿಯಲ್ಲಿ ಕ್ರಮ ಜರುಗದಿದ್ದ ಸಂದರ್ಭದಲ್ಲಿ ಜನರಿಗೆ ಇಷ್ಟೆಲ್ಲಾ ವಂಚನೆಯಾಗುತ್ತಿರುವುದನ್ನು ಭಾರತೀಯ ರಿಸರ್ವ್ ಬ್ಯಾಂಕ್ ಗಮನಿಸಿ ಅನೇಕ ಬಾರಿ ಚರ್ಚೆ ಈಗ ಒಂದು ಗೈಡ್‌ಲೈನ್ಸ್

11.50 ಎ.ಎಂ.

ಹೊರಡಿಸಿದೆ. ಆ ಗೈಡ್‌ಲೈನ್ಸಿನ ಹಿನ್ನೆಲೆಯಲ್ಲಿ ಠೇವಣಿಯನ್ನಿಡುವವರ ಹಿತವನ್ನು ಕಾಪಾಡುವ ಎಂಬ ಉದ್ದೇಶದಿಂದ ಈ ಮಸೂದೆಯನ್ನು ಇಲ್ಲಿ ತಂದಿದ್ದೇವೆ. ಇದರ ಬಗ್ಗೆ ಸದಸ್ಯರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಹನುಮೇಗೌಡರು ಹಣಕ್ಕಾಗಿ ಜನರಿಗೆ ವಂಚನೆ ಮಾಡುತಕ್ಕವರ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರುಗಳಾದ ಬಚ್ಚೇಗೌಡರು, ಯೋಗೇಶ್ ಭಟ್ಟರವರು, ಸುಬ್ಬಾರೆಡ್ಡಿಯವರು, ಕೃಷ್ಣಮೂರ್ತಿಯವರು, ಮಲ್ಲಿಕಾರ್ಜುನ್‌ರವರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಕೃಷ್ಣಮೂರ್ತಿಯವರು ಮಾತನಾಡುತ್ತಾ ಈ ಮಸೂದೆಯನ್ನು ತರುವಾಗ ಶಕ್ತಿ ಇಲ್ಲದಂತೆ ಆಗುತ್ತದೆ ಎಂಬ ಮಾತನ್ನು ಪ್ರಸ್ತಾಪ ಮಾಡಿದರು. ಯಾವುದೇ ಸಂಸ್ಥೆ ಮೋಸ ಮಾಡಿತ್ತಿದೆ ಎಂಬುದು ಕಂಡುಬಂದ ಸಂದರ್ಭದಲ್ಲಿ ನಾವೇನು ಡೆಪಾಸಿಟ್ ಅಧಿಕಾರಿಯೆಂದು ನೇಮಕ ಮಾಡಿದ್ದೇವೆ ಅವರು ತಕ್ಷಣವೇ ಪೋಲೀಸ್ ಸಹಕಾರದೊಂದಿಗೆ ಕ್ರಮತೆಗೆದುಕೊಳ್ಳಲು ಇವರಲ್ಲಿ ಅವಕಾಶ ಇದೆ. ಠೇವಣಿದಾರರನ್ನು ಮೋಸ ಮಾಡಿದಂಥ ಸಂದರ್ಭದಲ್ಲಿ ಆ ಸಂಸ್ಥೆಯ ನಿರ್ದೇಶಕರು ಇರಬಹುದು, ಇತರರು ಇರಬಹುದು ಅವರ ಆಸ್ತಿಯನ್ನು ಮಟ್ಟುಗೋಲು ಹಾಕಿಕೊಳ್ಳಲೂ ಇದರಲ್ಲಿ ಅವಕಾಶ ಇದೆ. ಇಷ್ಟೆಲ್ಲಾ ಇದ್ದರೂ ಅವರು ಮೋಸ ಮಾಡಿದಂಥ ಸಂದರ್ಭದಲ್ಲಿ ಹತ್ತು ವರ್ಷಗಳ ಸೆರೆವಾಸ ಮತ್ತು ಒಂದು ಲಕ್ಷ ರೂಪಾಯಿ ಜುಲ್ಮಾನೆಯನ್ನು ಹಾಕಬಹುದಾದ ಶಿಕ್ಷೆಯನ್ನಿಟ್ಟಿನ ವ್ಯವಸ್ಥೆಯನ್ನು ಈ ಮಸೂದೆಯಲ್ಲಿ ಮಾಡಿದ್ದೇವೆ. ಇದಕ್ಕಿಂತ ಸರಿಯಾದ ವ್ಯವಸ್ಥೆ ಇಲ್ಲವಾದ್ದರಿಂದ ಈ ರೀತಿ ವಂಚನೆಗೆ ಗುರಿಯಾಗುತ್ತಿರುವುದನ್ನು ಅರಿತಿದ್ದೇವೆ. ಇದನ್ನು ರೆಗ್ಯುಲೇಟ್ ಮಾಡುವುದಕ್ಕೋಸ್ಕರವಾಗಿ ಸರ್ಕಾರಕ್ಕೆ ಸಂಬಂಧ ಅಧಿಕಾರ ಇಂದು

ಬೇಕಾಗಿದೆ. ಇದನ್ನು ಈ ಮಸೂದೆಯ ಮೂಲಕ ಸದನವು ಅನುಮತಿ ಕೊಟ್ಟರೆ ಈಗ ಭಾರಿ ರೀತಿಯಲ್ಲಿ ವಂಚನೆಯಾಗುತ್ತಿರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ದೊಡ್ಡ ದೊಡ್ಡ ಕಂಪನಿಗಳಾದ ಕಿರ್ಲೋಸ್ಕರ್‌ನಲ್ಲೂ ಈ ರೀತಿ ವಂಚನೆಯಾಗುತ್ತದೆಂದು ಮಾನ್ಯ ಸುರೇಶ್ ಕುಮಾರ್‌ರವರು ಹೇಳಿದರು. ನಂಬಿಕೆಗೆ ಅರ್ಹವಾಗಿರುವ ಕಂಪನಿಗಳಲ್ಲೂ ಈ ರೀತಿ ಮೋಸವಾಗುತ್ತಿದೆಯೆಂದರೆ ಇದನ್ನು ತಡೆಗಟ್ಟಲು ಸರ್ಕಾರಕ್ಕೆ ಸಾಕಷ್ಟು ಅಧಿಕಾರ ಬೇಕಾಗುತ್ತದೆ. ಠೇವಣಿದಾರರು ಏನು ಠೇವಣಿಯನ್ನಿಡುತ್ತಾರೆ ಅದನ್ನು ವಾಪಸ್ ಕೊಡಲು ಶಕ್ತಿಶಾಲಿಯಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಕಾನೂನು ಈಗಾಗಲೇ ಮಹಾರಾಷ್ಟ್ರ, ಕೇರಳ, ಹರಿಯಾಣ ರಾಜ್ಯಗಳಲ್ಲಿ ಜಾರಿಯಲ್ಲಿದ್ದು ಯಶಸ್ವಿಯಾಗಿದೆ. ಇದರ ಬಗ್ಗೆ ಸದಸ್ಯರುಗಳು ಕೊಟ್ಟಿರುವ ಸಲಹೆ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೆ, ಸಮಕ್ಷ ಪ್ರಾಧಿಕಾರದ ಅಧಿಕಾರಿಯಿಂದ ಠೇವಣಿಯನ್ನು ತೆಗೆದುಕೊಳ್ಳುವ ಮೊದಲು ಅನುಮತಿಯನ್ನು ಪಡೆಯಬೇಕೆಂದು ನಾನು ಒತ್ತಾಯ ಮಾಡಿದ್ದೇನೆ. ಅದನ್ನು ಈ ಬಿಲ್ಲಿನಲ್ಲಿ, ತರಲು ಸಾಧ್ಯವಾಗುವುದಿದ್ದರೂ ರೂಲ್ಸ್‌ನಲ್ಲಿ ತರುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಯಾರು ಎಷ್ಟು ಬೇನಾದರೂ ವಸೂಲಿ ಮಾಡಬಹುದು. ಅನಂತರ ಜಾಹೀರಾತನ್ನು ನೋಡಿ ಸೂಮೋಟೊ ಕ್ರಮ ತೆಗೆದುಕೊಳ್ಳಬೇಕು ಏಕೆಂದರೆ ನಾವು ಜಾಹೀರಾತನ್ನೇ ನೋಡಿ ಬಹಳ ಸಲ ದಾರಿತಪ್ಪಿತ್ತೇವೆ. ಆದ್ದರಿಂದ ಈ ಎರಡನ್ನು ನಿಯಮಾವಳಿಯಲ್ಲಾದರು ಸೇರಿಸುವ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಇದಕ್ಕೆ ಅರ್ಥ ಬರುವುದಿಲ್ಲ.

ಶ್ರೀ ಎಂ. ಶಿವಣ್ಣ :— ಮಾನ್ಯ ಸದ್ಯಸರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಇದರ ಮೇಲ್ವಿಚಾರಣೆ ಮಾಡತಕ್ಕವರು ಆರ್.ಬಿ.ಐ.ನವರು ಮೋಸ ಮಾಡಿದಾಗ ಮಾತ್ರ ಇವರಲ್ಲಿ ರಾಜ್ಯ ಸರ್ಕಾರದ ಪಾತ್ರ ಬರುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಆರ್.ಬಿ.ಐ.ಗೂ, ಹಣಕಾಸು ಸಂಸ್ಥೆಗಳಿಗೂ ಸಂಬಂಧವಿಲ್ಲ. ಆರ್.ಬಿ.ಐ. ಇವುಗಳನ್ನು ನಿಯಂತ್ರಣ ಮಾಡುತ್ತಿಲ್ಲ. ಫೈನಾನ್ಸ್ ಕಂಪನಿಗಳನ್ನು ನೋಂದಾವಣೆ ಮಾಡತಕ್ಕದ್ದು ರಾಜ್ಯ ಸರ್ಕಾರದ ಮೂಲಕ. ಆದ್ದರಿಂದ ಇದನ್ನು ರಾಜ್ಯ ಸರ್ಕಾರವೇ ನಿಯಂತ್ರಣ ಮಾಡಬೇಕು.

ಅಧ್ಯಕ್ಷರು :— ಈಗ ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ. "ಪ್ರಸ್ತಾವ ಏನೆಂದರೆ 2000ದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ2 ರಿಂದ 21ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 21ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 21ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತವೆ"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ``2000ದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು" ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ ``2000ದ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕವನ್ನು" ಅಂಗೀಕರಿಸುವುದು.

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

4. ನಿಯಮ 69ರ ಮೇರೆಗೆ

ವಿಷಯ: ರಾಜ್ಯದಲ್ಲಿ ಧೃತರು ಬೆಳೆದಿರುವ ಮೆಕ್ಕೆಜೋಳ, ಭತ್ತ, ಅಲೂಗಡ್ಡೆ, ಎಣ್ಣೆ ಕಾಳುಗಳು, ತೊಗರಿ ಹಾಗೂ ತೆಂಗಿನ ಬೆಲೆ ಕುಸಿದಿರುವುದು.